# ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 218 RNI Number : KNKAN/25/A2770 18-08-2026 Tuesday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :218 ರಾಯಚೂರು 18-08-2026 ಮಂಗಳವಾರ ಪುಟ 04 ಬೆಲೆ ರೂ.2/- ಮೊ:8660146563


# ಬಿಜೆಪಿಯ ಹೊಸ ತಂಡ ರೆಡಿ: ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ ಬಿಎಲ್ : ಮಹಿಳೆಯರಿಗೆ ಹೆಚ್ಚಿನ ಆದ್ಯತೆ

ನವದೆಹಲಿ: ಬಿಜೆಪಿ ಸೋಮವಾರ ತನ್ನ ಹೊಸ ರಾಷ್ಟ್ರೀಯ ತಂಡವನ್ನು ಘೋಷಿಸಿದೆ. ಪಕ್ಷದ ಅಧ್ಯಕ್ಷ ನಿತಿನ್ ನಬಿನ್ ಅವರ ನೇತೃತ್ವದಲ್ಲಿ ಈ ತಂಡ ಕಾರ್ಯನಿರ್ವಹಿಸಲಿದೆ. ಈ ತಂಡದಲ್ಲಿ ಹಲವಾರು ಹೊಸ ಮುಖಗಳಿದ್ದು, ಅನುಭವ ಮತ್ತು ಯುವಕರ ಸಮ್ಮಿಶ್ರಣದಿಂದ ಕೂಡಿದೆ . ಮಹಿಳೆಯರಿಗೆ ಗಣನೀಯ ಪ್ರಾತಿನಿಧ್ಯ ನೀಡಲಾಗಿದೆ.

ಬಿಎಲ್ ಸಂತೋಷ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಹುದ್ದೆಯಲ್ಲೇ ಮುಂದುವರಿಯಲಿದ್ದಾರೆ. ಅಮೇಥಿಯ ಮಾಜಿ ಸಂಸದೆ ಸ್ಮೃತಿ ಇರಾನಿ, ತ್ರಿಪುರದ ಮಾಜಿ ಮುಖ್ಯಮಂತ್ರಿ ಬಿಪ್ಲಬ್ ಕುಮಾರ್ ದೇಬ್, ಸುನಿಲ್ ಬನ್ಸಾಲ್, ವಿನೋದ್ ತಾವ್ಡೆ, ಗಜೇಂದ್ರ ಪಟೇಲ್, ಸತೀಶ್ ಪೂನಿಯಾ, ಹರೀಶ್ ದ್ವಿವೇದಿ ಮತ್ತು ಸಂಜಯ್ ಭಾಟಿಯಾ ಅವರನ್ನು ಪ್ರಧಾನ ಕಾರ್ಯದರ್ಶಿಗಳನ್ನಾಗಿ ನೇಮಿಸಲಾಗಿದೆ.

ನಿತಿನ್ ನಬಿನ್ ಪಕ್ಷದ ಮುಖ್ಯಸ್ಥರಾದ ಸುಮಾರು ಆರು ತಿಂಗಳ ನಂತರ ಈ ಘೋಷಣೆ ಬಂದಿದೆ.

ಪಕ್ಷವು ಹಲವಾರು ಹಿರಿಯ ನಾಯಕರನ್ನು ರಾಷ್ಟ್ರೀಯ ಉಪಾಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ಅವರಲ್ಲಿ ರಾಜಸ್ಥಾನದ ಮಾಜಿ ಮುಖ್ಯಮಂತ್ರಿ ವಸುಂಧರಾ ರಾಜೆ ಸಿಂಧಿಯಾ, ಉತ್ತರಾಖಂಡದ ಮಾಜಿ ಮುಖ್ಯಮಂತ್ರಿ ತಿರತ್ ಸಿಂಗ್ ರಾವತ್, ರಾಮ್ ಮಾಧವ್, ಬೈಜ್ಯಂತ್ ಜಯ್ ಪಾಂಡಾ, ಡಿ. ಪುರಂದೇಶ್ವರಿ, ರೇಖಾ ವರ್ಮಾ, ವರ್ಷಾಬೆನ್ ನರೇಂದ್ರಭಾಯಿ ದೋಷಿ, ಡಾ. ಭಾರತಿ ಪ್ರವೀಣ್ ಪವಾರ್, ಮನ್‌ಪ್ರೀತ್ ಸಿಂಗ್ ಬಾದಲ್, ಲಾಲ್ ಸಿಂಗ್ ಆರ್ಯ, ಕರ್ನಾಟಕದ ಪ್ರೊ. ಎಂ. ನಾಗರಾಜ, ಪ್ರೊ. ತಾರಿಕ್ ಮನ್ಸೂರ್ ಮತ್ತು ಡಾ. ಮಧುಚಂದ್ರ ಕಾರ್ ಸೇರಿದ್ದಾರೆ. 13 ರಾಷ್ಟ್ರೀಯ ಉಪಾಧ್ಯಕ್ಷರಲ್ಲಿ ಆರು ಮಂದಿ ಮಹಿಳೆಯರಿದ್ದಾರೆ.




ರಾಷ್ಟ್ರೀಯ ಕಾರ್ಯದರ್ಶಿಗಳಾಗಿ ಕವಿತಾ ಪಾಟಿದಾರ್ (ಮಧ್ಯಪ್ರದೇಶ), ಕೆ. ಸುರೇಂದ್ರನ್ (ಕೇರಳ), ಡಾ. ಭೋಲಾ ಸಿಂಗ್ (ಉತ್ತರ ಪ್ರದೇಶ), ಪ್ರದೀಪ್ ವರ್ಮಾ (ಜಾರ್ಖಂಡ್), ಜಗದೀಶ್ ಈಶ್ವರಭಾಯಿ ಪಟೇಲ್ (ಗುಜರಾತ್), ಸಂದೀಪ್ ಪಾಠಕ್ (ದೆಹಲಿ), ಫಾಂಗ್ನಾನ್ ಕೊನ್ಯಾಕ್ (ನಾಗಾಲ್ಯಾಂಡ್), ಸಂಗೀತಾ ಯಾದವ್ (ಉತ್ತರ ಪ್ರದೇಶ), ಅನಿಲ್ ಆಂಟೋನಿ (ಕೇರಳ), ಎಂ. ವೆಂಕಟೇಶನ್ (ತಮಿಳುನಾಡು), ಮನೋಜ್ ಟಿಗ್ಗಾ (ಪಶ್ಚಿಮ ಬಂಗಾಳ), ಸಿದ್ಧಾರ್ಥ್ ಶಂಭು (ಬಿಹಾರ), ಸ್ವದೇಶ್ ಸಿಂಗ್ (ದೆಹಲಿ), ಮೃಗಾಂಕ ಡಿಯೋ ಬರ್ಮನ್ (ಅಸ್ಸಾಂ), ರೋಹನ್ ಗುಪ್ತಾ (ಗುಜರಾತ್) ಮತ್ತು ಜೈ ಪ್ರಕಾಶ್ (ದೆಹಲಿ) ಅವರನ್ನು ನೇಮಿಸಲಾಗಿದೆ. ಪಿಯೂಷ್ ಗೋಯಲ್ ಅವರನ್ನು ಮತ್ತೊಮ್ಮೆ ಪಕ್ಷದ ರಾಷ್ಟ್ರೀಯ ಖಜಾಂಚಿಯಾಗಿ ನೇಮಕ ಮಾಡಲಾಗಿದೆ.

ರಾಜ್ಯಸಭಾ ಸಂಸದ ತರುಣ್ ಚುಗ್ ಅವರನ್ನು ಕೇಂದ್ರ ಕಚೇರಿ ಉಸ್ತುವಾರಿಯನ್ನಾಗಿ ನೇಮಿಸಲಾಗಿದೆ. ಗುಜರಾತ್ ಸಂಸದ ಹೇಮಾಂಗ್ ಜೋಶಿ ಅವರಿಗೆ ಯುವ ಮೋರ್ಚಾ ಉಸ್ತುವಾರಿ ವಹಿಸಲಾಗಿದ್ದು, ಮಹಿಳಾ ಮೋರ್ಚಾವನ್ನು ಛತ್ತೀಸ್‌ಗಢದ ರೂಪ್ ಕುಮಾರಿ ಚೌಧರಿ ನೋಡಿಕೊಳ್ಳಲಿದ್ದಾರೆ.

ಲೋಕಸಭಾ ಸಂಸದ ಅನಿಲ್ ಬಲುನಿ ಮಾಧ್ಯಮ ಸಂಚಾಲಕರಾಗಿ ಮುಂದುವರಿಯಲಿದ್ದಾರೆ. ಸಹ ಸಂಚಾಲಕರಾಗಿ ಆಶಿಶ್ ಉಷಾ ಅಗರ್ವಾಲ್ (ಮಧ್ಯಪ್ರದೇಶ), ಪ್ರದೀಪ್ ಭಂಡಾರಿ (ದೆಹಲಿ) ಮತ್ತು ಸಿದ್ಧಾರ್ಥ್ ಯಾದವ್ (ದೆಹಲಿ) ಇದ್ದಾರೆ. ಛತ್ತೀಸ್‌ಗಢದ ದೀಪಕ್ ಮಾಸ್ಕಿ ಅವರನ್ನು ಸಾಮಾಜಿಕ ಮಾಧ್ಯಮ ಸಂಚಾಲಕರಾಗಿ ಹೆಸರಿಸಲಾಗಿದೆ.

2027ರಲ್ಲಿ ಉತ್ತರ ಪ್ರದೇಶ ಸೇರಿದಂತೆ ಹಲವಾರು ರಾಜ್ಯಗಳಲ್ಲಿ ಚುನಾವಣೆ ನಡೆಯುವಾಗ ನಿತಿನ್ ನಬಿನ್ ಅವರ ಹೊಸ ತಂಡವು ಪ್ರಮುಖ ಪರೀಕ್ಷೆಯನ್ನು ಎದುರಿಸಲಿದೆ. ಪಕ್ಷದ ರಚನೆಯಲ್ಲಿನ ಈ ಬದಲಾವಣೆಗಳು ಕೇಂದ್ರ ಸಚಿವ ಸಂಪುಟದಲ್ಲಿ ಪುನರ್ರಚನೆಗೆ ದಾರಿ ಮಾಡಿಕೊಡಬಹುದು ಎಂದು ವಿಶ್ಲೇಷಿಸಲಾಗುತ್ತಿದೆ.

ಹೀಗಿದೆ ಪಕ್ಷದ ಸಂರಚನೆ:

ಬಿಜೆಪಿಯ ಅತ್ಯುನ್ನತ ಮಂಡಳಿಯಲ್ಲಿ ಪ್ರಧಾನಿ ನರೇಂದ್ರ ಮೋದಿ, ಹಿರಿಯರಾದ ಎಲ್.ಕೆ. ಅಡ್ವಾಣಿ ಮತ್ತು ಮುರಳಿ ಮನೋಹರ್ ಜೋಶಿ ಮತ್ತು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸೇರಿದಂತೆ ನಾಲ್ವರ ಮಾರ್ಗದರ್ಶಕ ತಂಡವಿದೆ. ಈ ನಾಲ್ವರು ಮಾರ್ಗದರ್ಶಕರು ಪಕ್ಷದ ಚೌಕಟ್ಟನ್ನು ರೂಪಿಸುತ್ತಾರೆ ಮತ್ತು ಪಕ್ಷಕ್ಕೆ ಸೇವೆ ಸಲ್ಲಿಸಿದ ಅನುಭವವನ್ನು ಧಾರೆ ಎರೆಯಲಿದ್ದಾರೆ.

ಮಾರ್ಗದರ್ಶಕ ತಂಡದ ನಂತರ 12 ಸದಸ್ಯರ ಸಂಸದೀಯ ಮಂಡಳಿ ಇದೆ. ಈ ಮಂಡಳಿಯ ಅಧ್ಯಕ್ಷತೆಯನ್ನು ಮೋದಿ ವಹಿಸಿದ್ದಾರೆ. ಮಂಡಳಿಯು ಹಿರಿಯ ಸಚಿವರು ಮತ್ತು ಸಂಘಟನಾ ಪ್ರಮುಖರನ್ನು ಒಳಗೊಂಡಿದೆ.

ನಿತಿನ್ ನಬಿನ್

3ನೇ ಪುಟ.....

## ಆಗಸ್ಟ್ 20ಕ್ಕೆ ದೇವರಾಜ ಅರಸು ಜಯಂತಿ: ಅದ್ದೂರಿ ಆಚರಣೆಗೆ ಸಿದ್ಧತೆ

# ಸೆಪ್ಟೆಂಬರ್‌ನಲ್ಲಿ ಅರಸು ಪ್ರತಿಮೆ ಅನಾವರಣಕ್ಕೆ ಸಿದ್ಧತೆ; ಸ್ಮಾರಕ ಭವನ ನಿರ್ಮಾಣಕ್ಕೂ ಪ್ರಯತ್ನ ಕೆ. ಶಾಂತಪ್ಪ



ರಾಯಚೂರು,ಆ.17-

ಜಿಲ್ಲಾಡಳಿತದ ಸಹಯೋಗದಲ್ಲಿ ಆಗಸ್ಟ್ 20ರಂದು ಮಾಜಿ ಮುಖ್ಯಮಂತ್ರಿ ಹಾಗೂ ಹಿಂದುಳಿದ ವರ್ಗಗಳ ಹರಿಕಾರ ಡಿ. ದೇವರಾಜ ಅರಸು ಅವರ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲು ಸಿದ್ಧತೆ ಕೈಗೊಳ್ಳಲಾಗಿದೆ ಎಂದು ಜಿಲ್ಲಾ ಹಿಂದುಳಿದ ಜಾತಿಗಳ ಒಕ್ಕೂಟದ ಅಧ್ಯಕ್ಷ ಕೆ. ಶಾಂತಪ್ಪ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಯಂತಿ ಕಾರ್ಯಕ್ರಮದಲ್ಲಿ ಸಚಿವರು, ಶಾಸಕರು, ಸಂಸದರು ಹಾಗೂ ವಿವಿಧ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಅಂದು ಬೆಳಿಗ್ಗೆ 9.30ಕ್ಕೆ ಮಹಿಳಾ ಸಮಾಜದಿಂದ ಅಂಬೇಡ್ಕರ್ ವೃತ್ತದ ಮೂಲಕ ರಂಗಮಂದಿರದವರೆಗೆ ದೇವರಾಜ ಅರಸು ಅವರ ಭಾವಚಿತ್ರದ ಮೆರವಣಿಗೆ ನಡೆಯಲಿದೆ ಎಂದರು.

ಹಿಂದುಳಿದ ವರ್ಗಗಳ ಶೈಕ್ಷಣಿಕ ಪ್ರಗತಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ವಿವಿಧ ಕ್ಷೇತ್ರಗಳಲ್ಲಿ ಉತ್ತಮ ಸಾಧನೆ ಮಾಡಿದ ಹಾಗೂ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಗುವುದು. ದೇವರಾಜ ಅರಸು ಅವರ ಸಾಮಾಜಿಕ ನ್ಯಾಯದ

3ನೇ ಪುಟ.....

# ನೂಲಿಯ ಚಂದಯ್ಯ ಜಯಂತಿ ಆ.28ರಂದು :ಹುಲಿಗೆಪ್ಪ

ರಾಯಚೂರು,ಆ.17-

ಕಾಯಕಯೋಗಿ ಶ್ರೀ ನೂಲಿಯ ಚಂದಯ್ಯನವರ 919ನೇ ಜಯಂತಿಯನ್ನು ಆ.28ರಂದು ರಾಯಚೂರಿನಲ್ಲಿ ಅದ್ದೂರಿಯಾಗಿ ಆಚರಿಸಲಾಗುತ್ತಿದ್ದು, ಕುಳುವ ಸಮಾಜದ ಅಭಿವೃದ್ಧಿಗಾಗಿ ನೂಲಿಯ ಚಂದಯ್ಯ ಅಭಿವೃದ್ಧಿ ನಿಗಮ ಸ್ಥಾಪಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಲಾಗುವುದು ಎಂದು ಜಿಲ್ಲಾ ಕುಳುವ ಮಹಾ ಸಂಘದ ಗೌರವಾಧ್ಯಕ್ಷ ಹುಲಿಗೆಪ್ಪ ಮಾಣಿಕ್ ಹೇಳಿದರು.



ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಖಿಲ ಕರ್ನಾಟಕ ಕುಳುವ ಮಹಾಸಂಘದ ನಿರಂತರ ಹೋರಾಟದ ಫಲವಾಗಿ ರಾಜ್ಯ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಪ್ರತಿವರ್ಷ ನೂಲ ಹುಣ್ಣಿಮೆ ದಿನದಂದು ರಾಜ್ಯದ ಎಲ್ಲ ಜಿಲ್ಲಾ ಹಾಗೂ ತಾಲೂಕು ಕೇಂದ್ರಗಳಲ್ಲಿ ನೂಲಿಯ ಚಂದಯ್ಯ ಜಯಂತಿಯನ್ನು ಸರ್ಕಾರದ ವತಿಯಿಂದ ಆಚರಿಸಲು ಏ.28ರಂದು ಆದೇಶ ಹೊರಡಿಸಿರುವುದು ಸಮಾಜಕ್ಕೆ ಹೆಮ್ಮೆಯ ಸಂಗತಿಯಾಗಿದೆ ಎಂದರು.

ರಾಜ್ಯ ಸರ್ಕಾರದ ವತಿಯಿಂದ ಐದನೇ ಬಾರಿಗೆ ಜಯಂತ್ಯೋತ್ಸವ ಆಚರಿಸಲಾಗುತ್ತಿದ್ದು, ಈ ಐತಿಹಾಸಿಕ ಸಂದರ್ಭದಲ್ಲಿ ಕುಳುವ ಸಮಾಜದ ಧಾರ್ಮಿಕ ಹಾಗೂ ಭಾವನಾತ್ಮಕ ಪ್ರೇರಣೆಯಾಗಿರುವ ನೂಲಿಯ ಚಂದಯ್ಯನವರ ಹೆಸರಿನಲ್ಲಿ ಪ್ರತ್ಯೇಕ ಅಭಿವೃದ್ಧಿ ನಿಗಮ ಸ್ಥಾಪನೆಗೆ ಸರ್ಕಾರದ ಗಮನ ಸೆಳೆಯಲಾಗುವುದು ಎಂದು ತಿಳಿಸಿದರು.

ಆ.28ರಂದು ಬೆಳಿಗ್ಗೆ 9 ಗಂಟೆಗೆ ನಗರದ ಟಿಪ್ಪು ಸುಲ್ತಾನ್ ಗಾರ್ಡನ್‌ನಿಂದ ನೂಲಿಯ ಚಂದಯ್ಯನವರ ಭಾವಚಿತ್ರದೊಂದಿಗೆ ಭವ್ಯ ಮೆರವಣಿಗೆ ಆರಂಭವಾಗಲಿದೆ. ಬಾಜಾ-ಭಜಂತ್ರಿ, ಡೊಳ್ಳು, ಪಲಕಲಕೊಲು, ಕುಂಭ-ಕಳಸ ಸೇರಿದಂತೆ ವಿವಿಧ ಕಲಾ ತಂಡಗಳೊಂದಿಗೆ ಮೆರವಣಿಗೆಯು ಬಸವೇಶ್ವರ ವೃತ್ತ, ಡಾ.ಬಿ.ಆರ್.ಅಂಬೇಡ್ಕರ್ ಮಾರ್ಗವಾಗಿ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರ ತಲುಪಲಿದೆ. ಬಳಿಕ ವೇದಿಕೆ ಕಾರ್ಯಕ್ರಮ ನಡೆಯಲಿದೆ ಎಂದರು.

3ನೇ ಪುಟ.....

# ವಟಗಲ್ ಗ್ರಾಮದಲ್ಲಿ ಉಚಿತ ಬೃಹತ್ ಆರೋಗ್ಯ ಶಿಬಿರ: 628 ಜನರಿಗೆ ಉಚಿತ ವೈದ್ಯಕೀಯ ಸೇವೆ



ಕವಿತಾಳ: ಗ್ರಾಮೀಣ ಭಾಗದ ಬಡ ಜನರ ಆರೋಗ್ಯ ಸಮಸ್ಯೆಗಳಿಗೆ ನೆರವಾಗುವ ಉದ್ದೇಶದಿಂದ ಉಚಿತ ಆರೋಗ್ಯ ಶಿಬಿರಗಳನ್ನು ಸಂಘಟಿಸುವುದು ಅತ್ಯಂತ ಶ್ಲಾಘನೀಯ ಕಾರ್ಯ ಎಂದು ಅಖಿಲ ಕರ್ನಾಟಕ ಜನ ಜಾಗೃತಿ ವೇದಿಕೆ ಟ್ರಸ್ಟ್ (ಧರ್ಮಸ್ಥಳ) ರಾಜ್ಯ ಸಂಘಟನೆಯ ಅಧ್ಯಕ್ಷ ನಟರಾಜ ಬದಾಮಿ ಹೇಳಿದರು.

ಸಮೀಪದ ವಟಗಲ್ ಗ್ರಾಮದ ಬಸವೇಶ್ವರ ದೇವಸ್ಥಾನದಲ್ಲಿ ಬಸವೇಶ್ವರ ದೇವಸ್ಥಾನ ಚಾರಿಟೇಬಲ್ ಟ್ರಸ್ಟ್, ಲಿಂಗಸುಗೂರಿನ ಅದ್ವಿಕಾ ನರ್ಸಿಂಗ್ ಕಾಲೇಜು ಹಾಗೂ ವಟಗಲ್‌ನ ಶಾರದಾ ಪಬ್ಲಿಕ್ ಶಾಲೆ ಇವರ ಜಂಟಿ ಸಹಯೋಗದಲ್ಲಿ ಆಯೋಜಿಸಿದ್ದ ಉಚಿತ ಆರೋಗ್ಯ ಶಿಬಿರವನ್ನು ಅವರು ಉದ್ಘಾಟಿಸಿ

ಸಭೆಯನ್ನುದ್ದೇಶಿಸಿ ಮಾತನಾಡಿದ ನಟರಾಜ ಬಾದಾಮಿ, ಇಂದಿನ ದಿನಗಳಲ್ಲಿ ಎಲ್ಲಾ ಜಾತಿ-ಜನಾಂಗದ ಜನರು ದುರ್ವ್ಯಸನಗಳಿಗೆ ಬಲಿಯಾಗಿ ಹಲವು ಬಡ ಕುಟುಂಬಗಳು ಬೀದಿಗೆ ಬೀಳುತ್ತಿರುವುದು ಶೋಚನೀಯ. ದುಷ್ಟಟಕ್ಕೆ ಒಳಗಾದವರಿಗೆ ಹೆಚ್ಚಾಗಿ ಮನಸ್ಸಿನ ಪರಿವರ್ತನೆಯ ಮೂಲಕ ಪುನಶ್ಚೇತನ ನೀಡಿ, 'ನಶೆ ಮುಕ್ತ ಭಾರತ' ನಿರ್ಮಾಣಕ್ಕೆ ಎಲ್ಲರೂ ಕೈಜೋಡಿಸಬೇಕು, ಎಂದು ಕರೆ ನೀಡಿದರು.

ಯದ್ದಲದೊಡ್ಡಿಯ ಸುವರ್ಣಗಿರಿ ವಿರಕ್ತಮಠದ ಶ್ರೀ ಮಹಾಲಿಂಗ ಮಹಾಸ್ವಾಮಿಗಳು ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಆಶೀರ್ವದಿಸಿ ಶುಭ ಹಾರೈಸಿದರು.

ಶಿಬಿರದ ಅಂಗವಾಗಿ ಗುಟ್ಕಾ, ತುಂಬಾಕು, ಮದ್ಯಪಾನ ಹಾಗೂ ಧೂಮಪಾನದಂತಹ ದುರ್ವ್ಯಸನಗಳ ಭೀಕರ ಪರಿಣಾಮಗಳ ಕುರಿತು ಅದ್ವಿಕಾ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳು ಪ್ರದರ್ಶಿಸಿದ ಜಾಗೃತಿ ನಾಟಕ

3ನೇ ಪುಟ.....

# ವಟಗಲ್‌ನಲ್ಲಿ ಶ್ರೀ ಗಿರಿಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ಸಂಘ ಉದ್ಘಾಟನೆ: ಆದನಗೌಡ ಪಾಟೀಲ್ ಹಾಗೂ ತಂಡದ ಕಾರ್ಯ ಶ್ಲಾಘನೀಯ ವಿಶ್ವನಾಥ್ ಪಾಟೀಲ ತೋರಣದಿನ್ನಿ

ಕವಿತಾಳ ,ಆ.17-

ಬೃಹತ್ ಪಟ್ಟಣ ಮತ್ತು ನಗರಗಳಲ್ಲಿಯೇ ಸಹಕಾರಿ ಸಂಘಗಳನ್ನು ನಡೆಸುವುದು ಅತ್ಯಂತ ಸವಾಲಿನ ಕೆಲಸವಾಗಿರುವ ಈ ದಿನಗಳಲ್ಲಿ, ವಟಗಲ್‌ನಂತಹ ಸಣ್ಣ ಗ್ರಾಮದಲ್ಲಿ ಶ್ರೀ ಗಿರಿಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ಸಂಘ ಸ್ಥಾಪಿಸಿ, ಸುಸಜ್ಜಿತ ಕಚೇರಿಯನ್ನು ಉದ್ಘಾಟಿಸಿರುವುದು ಅತ್ಯಂತ ಶ್ಲಾಘನೀಯ ಕಾರ್ಯವಾಗಿದೆ ಎಂದು ಆರ್ ಡಿಸಿಸಿ ಬ್ಯಾಂಕ್ ಅಧ್ಯಕ್ಷರಾದ ವಿಶ್ವನಾಥ ಪಾಟೀಲ್ ಹೇಳಿದರು.



ಸಂಘದ ಉದ್ಘಾಟನಾ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಸಂಸ್ಥೆಯ ಸಂಸ್ಥಾಪಕರಾದ ಆದನಗೌಡ ಪಾಟೀಲ್ ಹಾಗೂ ಅವರ ನಿರ್ದೇಶಕರ ತಂಡದ ಗ್ರಾಮೀಣಾಭಿವೃದ್ಧಿ ಮತ್ತು ಸಹಕಾರಿ ಕ್ಷೇತ್ರದ ಮೇಲಿನ ಕಳಕಳಿಯನ್ನು ಮುಕ್ತಕಂಠದಿಂದ ಶ್ಲಾಘಿಸಿದರು. ಗ್ರಾಮೀಣ ಭಾಗದ ಜನರಿಗೆ ಆರ್ಥಿಕ ನೆರವು ಹಾಗೂ ಸುಲಭ ಸೇವೆ ಒದಗಿಸಲು ಈ ಸಂಘವು ಸಹಕಾರಿಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಭೆಯನ್ನು ಉದ್ದೇಶಿಸಿ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷರಾದ ಎಂ. ದೊಡ್ಡ ಬಸವರಾಜ್ ಮಾತನಾಡಿದರು.

ಈ ಶುಭ ಸಮಾರಂಭದಲ್ಲಿ ನವಲಕಲ್ ನ ಅಭಿನವ ಸೋಮನಾಥ ಶಿವಾಚಾರ್ಯರು ಸಾನಿಧ್ಯ ವಹಿಸಿ ಆಶೀರ್ವದಿಸಿದರು ಮಲ್ಲನಗೌಡ ನಕ್ಕುಂದಿ ವಕೀಲರು, ಪ್ರಸನ್ನ ಪಾಟೀಲ್, ಡಾ. ಮಂಜುನಾಥ್

3ನೇ ಪುಟ.....

# ಜೆಡಿಎಸ್ ಎಸ್‌ಸಿ ಮೋರ್ಚಾ ಅಧ್ಯಕ್ಷರಾಗಿ ಮಾರೆಪ್ಪ ಕೊತ್ತದೊಡ್ಡಿ



ನೆರಳು ವಾರ್ತೆ, ದೇವದುರ್ಗ, ಆ.16:

ಅರಕೇರಾ ತಾಲೂಕು ಜಾತ್ಯಾತೀತ ಜನತಾದಳ (ಜೆಡಿಎಸ್) ಕಾರ್ಯಾಲಯದಲ್ಲಿ ನಡೆದ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಅರಕೇರಾ ತಾಲೂಕು ಜೆಡಿಎಸ್ ಎಸ್‌ಸಿ ಮೋರ್ಚಾ ಅಧ್ಯಕ್ಷರಾಗಿ ಕೊತ್ತದೊಡ್ಡಿಯ ಮಾರೆಪ್ಪ ಮಾಸ್ಟರ್ ಅವರನ್ನು ಆಯ್ಕೆ ಮಾಡಲಾಯಿತು.

ಆಯ್ಕೆಯ ಬಳಿಕ ಅವರಿಗೆ ಪ್ರಮಾಣಪತ್ರವನ್ನು ನೀಡಿ ಅಭಿನಂದಿಸಲಾಯಿತು. ತಮ್ಮನ್ನು ಎಸ್‌ಸಿ ಮೋರ್ಚಾ ಅಧ್ಯಕ್ಷರಾಗಿ ಆಯ್ಕೆ ಮಾಡಿದ ಶಾಸಕಿ ಜಿ. ಕರೆಮ್ಮ ನಾಯಕ್ ಹಾಗೂ ಜೆಡಿಎಸ್‌ನ ಎಲ್ಲಾ ಕಾರ್ಯಕರ್ತರಿಗೆ ಮಾರೆಪ್ಪ ಮಾಸ್ಟರ್ ಕೃತಜ್ಞತೆ ಸಲ್ಲಿಸಿದರು.

ಮುಂದಿನ ದಿನಗಳಲ್ಲಿ ಪಕ್ಷವು ವಹಿಸಿರುವ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿರ್ವಹಿಸುವುದರ ಜೊತೆಗೆ, ಪಕ್ಷದ ಸಂಘಟನೆ ಬಲಪಡಿಸಲು ಹಾಗೂ ಕಾರ್ಯಕರ್ತರೊಂದಿಗೆ ಸಮನ್ವಯದಿಂದ ಕೆಲಸ ಮಾಡುವುದಾಗಿ ಮಾರೆಪ್ಪ ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

# ಆಗಸ್ಟ್ 19ರಂದು ಗ್ರಾಹಕರ ಕುಂದು ಕೊರತೆ ಸಭೆ

ರಾಯಚೂರು ಆ.17 -

ಜೆಸ್ಕಾಂ ಕಾರ್ಯ ಮತ್ತು ಪಾಲನೆ ಉಪ ವಿಭಾಗ-01ರ ಕಚೇರಿಯಲ್ಲಿ ರಾಯಚೂರಿನ ಅಧೀಕ್ಷಕ ಅಭಿಯಂತರರು ಇವರ ಅಧ್ಯಕ್ಷತೆಯಲ್ಲಿ ಆಗಸ್ಟ್ 19ರ ಬೆಳಿಗ್ಗೆ 11ಗಂಟೆಗೆ ಗ್ರಾಹಕರ ಕುಂದು ಕೊರತೆ ಸಭೆಯನ್ನು ಹಮ್ಮಿಕೊಳ್ಳಲಾಗಿದ್ದು, ಸದರಿ ಸಭೆಗೆ ರಾಯಚೂರು ಉಪ ವಿಭಾಗ-01ರ ವ್ಯಾಪ್ತಿಯಲ್ಲಿ ಬರುವ ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ಉಪ ವಿಭಾಗ-01ರ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹೀರಾ ಗ್ರಾಮದ ಸರಕಾರಿ ಮಾದರಿ ಹಿ. ಪ್ರಾ.ಶಾಲೆಯಲ್ಲಿ ಎಸ್‌ಡಿಎಂಸಿ ಸಮಿತಿ ರಚನೆ

ಹೀರಾ, ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಹೀರಾ ಇಲ್ಲಿ ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿ ರಚನಾ ಸಭೆಯನ್ನು ಯಶಸ್ವಿಯಾಗಿ ನಡೆಸಲಾಯಿತು.



ಸಭೆಯಲ್ಲಿ ಶಾಲೆಯ ಪಾಲಕ ಪೋಷಕರು ಹಾಗೂ ಊರಿನ ಹಿರಿಯರು ಭಾಗವಹಿಸಿ, ಶಾಲೆಯ ಶೈಕ್ಷಣಿಕ ಗುಣಮಟ್ಟ, ಮಕ್ಕಳ ಹಾಜರಾತಿ ಹಾಗೂ ಶಾಲೆಯ ಸರ್ವಾಂಗೀಣ ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳ ಕುರಿತು ಚರ್ಚಿಸಿದರು. ಸಭೆಯಲ್ಲಿ ನಿಯಮಾನುಸಾರ ಎಸ್‌ಡಿಎಂಸಿ ಸಮಿತಿಯನ್ನು ರಚಿಸಲಾಯಿತು.

ನೂತನವಾಗಿ ಅಧ್ಯಕ್ಷರಾಗಿ ಮಹಾಂತೇಶ ಸಾಹುಕಾರ ಉಪಾಧ್ಯಕ್ಷರಾಗಿ ಗಿರಿಜಾ ಗಂಡ ಶಿವರಾಜ ಸದಸ್ಯರಾಗಿ ಜಯಪ್ಪ, ಅಮರೇಶ, ನರಸಣ್ಣ ದೊರೆ, ವೀರೇಶ, ಅಯ್ಯಣ್ಣ, ಉಮಾದೇವಿ ಪರಮೇಶ,ಉಮಾದೇವಿ ಸಂಗಮೇಶ, ಗಂಗಮ್ಮ ಯಮನಪ್ಪ, ಮೌಲಾಸಾಬ್, ಜರಿನಾ ಬೇಗಂ ಭಾಷಮೀಯಾ, ಲಿಂಗಣ್ಣ ಯಾದವ್, ಗಂಗಮ್ಮ ದೇವಪುತ್ರಪ್ಪ, ರೇಣುಕಾ ನಾಗರಾಜ, ಸಂಗೀತಾ ಸೋಮಶೇಖರ, ಪವಿತ್ರ ಚಂದ್ರಶೇಖರ ಮೇಟಿ ಆಯ್ಕೆಯಾಗಿದ್ದಾರೆ

ಈ ಸಂದರ್ಭದಲ್ಲಿ ಶ್ರೀ ವೆಂಕಟೇಶ್ ಅವರು ಉಪಸ್ಥಿತರಿದ್ದು, ಎಸ್‌ಡಿಎಂಸಿ ರಚನೆ, ಸಮಿತಿಯ ಜವಾಬ್ದಾರಿಗಳು ಹಾಗೂ ಶಾಲೆಯ ಅಭಿವೃದ್ಧಿಯಲ್ಲಿ ಸಮಿತಿಯ ಪಾತ್ರದ ಕುರಿತು ಅಗತ್ಯ ಮಾರ್ಗದರ್ಶನ ನೀಡಿದರು.

ಶಾಲೆಯ ಮುಖ್ಯ ಶಿಕ್ಷಕರು, ಶಿಕ್ಷಕ ವೃಂದ, ಪಾಲಕಪೋಷಕರು ಹಾಗೂ ಗ್ರಾಮಸ್ಥರು ಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ, ಶಾಲೆಯ ಅಭಿವೃದ್ಧಿಗೆ ಅಗತ್ಯ ಸಹಕಾರ ನೀಡುವ ಭರವಸೆ ನೀಡಿದರು.

ಶಾಲೆಯ ಶೈಕ್ಷಣಿಕ ಹಾಗೂ ಸರ್ವಾಂಗೀಣ ಅಭಿವೃದ್ಧಿಗಾಗಿ ಎಸ್‌ಡಿಎಂಸಿ ಸದಸ್ಯರು, ಪೋಷಕರು ಮತ್ತು ಗ್ರಾಮಸ್ಥರು ಒಗ್ಗಟ್ಟಿನಿಂದ ಕಾರ್ಯನಿರ್ವಹಿಸುವಂತೆ ಸಭೆಯಲ್ಲಿ ಕರೆ ನೀಡಲಾಯಿತು.

ಸಂದರ್ಭದಲ್ಲಿ ಊರಿನ ಹಿರಿಯರಾದ ಹನುಮಂತ ರಾಯ್ ಗೌಡ, ಅಯ್ಯಪ್ಪ ದೊರೆ ಮಲ್ಲಿಕಾರ್ಜುನ ಮಾಸ್ತ್ರು ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಾದ ಖಾಜಾ ಬೇಗಂ ಮುಖ್ಯ ಗುರುಗಳಾದ ಕುಮಾರಿ ವಿಜಯಲಕ್ಷ್ಮಿ ಹಾಗೂ ಪೊಲೀಸ್ ಇಲಾಖೆಯ ವೀರೇಶ್ ಸಂಸ್ಥೆಯ ತಾಲ್ಲೂಕು ಸಂಯೋಜಕರಾದ ಶ್ರೀ ದೇವರಾಜ್, ಊರಿನ ಹಿರಿಯರು ಯುವಕರು ಸಭೆಯಲ್ಲಿ ಉಪಸ್ಥಿತರಿದ್ದರು.

# ಮಾತೋಶ್ರೀ ಡಾ.ದಾಕ್ಷಾಯಿಣಿ ಅವ್ವಾಜಿಗೆ ಅಕ್ಕಮಹಾದೇವಿ ರತ್ನ ಪ್ರಶಸ್ತಿ

ಕಲಬುರಗಿ,ಆ.17-

ಶಿಕ್ಷಣ, ಸಾಮಾಜಿಕ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಸಲ್ಲಿಸುತ್ತಿರುವ ಗಣನೀಯ ಸೇವೆಯನ್ನು ಗುರುತಿಸಿ ಶ್ರೀ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷರು ಹಾಗೂ ಶರಣಬಸವ ವಿಶ್ವವಿದ್ಯಾಲಯದ ಕುಲಾಧಿಪತಿಗಳಾದ ಮಾತೋಶ್ರೀ ಡಾ. ದಾಕ್ಷಾಯಿಣಿ ಅವ್ವಾಜಿ ಅವರಿಗೆ ಪ್ರತಿಷ್ಠಿತ ಅಕ್ಕಮಹಾದೇವಿ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಮಾಜ, ಶಿಕ್ಷಣ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿರುವ ಗಣ್ಯರನ್ನು ಗೌರವಿಸುವ ಉದ್ದೇಶದಿಂದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಮಹಾರಾಷ್ಟ್ರ ರಾಜ್ಯ ಘಟಕದ ವತಿಯಿಂದ ಭಾನುವಾರ ಮುಂಬೈನ ನಾರಿಮನ್ ಪಾಯಿಂಟ"ನಲ್ಲಿರುವ ಯಶವಂತ ರಾವ್ ಚವ್ಹಾಣ್ ಸೆಂಟರ್‌ನಲ್ಲಿ ಸನ್ಮಾನ ಸಮಾರಂಭ ಆಯೋಜಿಸಲಾಗಿತ್ತು. ಕಾಶಿ ಪೀಠದ ಶ್ರೀ 1008 ಜ್ಞಾನಸಿಂಹಾಸನಾಧೀಶ್ವರ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮೀಜಿ ಅವರ ದಿವ್ಯ ಸಾನ್ನಿಧ್ಯದಲ್ಲಿ ಹಾಗೂ ಮಹಾರಾಷ್ಟ್ರ ಮತ್ತು ಕರ್ನಾಟಕ ಸೇರಿದಂತೆ ವಿವಿಧ ಭಾಗಗಳಿಂದ ಆಗಮಿಸಿದ್ದ ಗಣ್ಯರ ಉಪಸ್ಥಿತಿಯಲ್ಲಿ ಡಾ. ದಾಕ್ಷಾಯಿಣಿ ಅವ್ವಾಜಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಮಹಿಳಾ ಸಬಲೀಕರಣ, ಶಿಕ್ಷಣ ಹಾಗೂ ಸಮಾಜಸೇವಾ ಕ್ಷೇತ್ರಗಳಲ್ಲಿ ಅವರು ಸಲ್ಲಿಸಿರುವ ವಿಶಿಷ್ಟ ಕೊಡುಗೆ, ದಕ್ಷ ನಾಯಕತ್ವ ಮತ್ತು ಗಣನೀಯ ಸೇವೆಯನ್ನು ಗುರುತಿಸಿ ಈ ಪ್ರತಿಷ್ಠಿತ ಗೌರವ ನೀಡಲಾಗಿದೆ.



ಇದೇ ಸಂದರ್ಭದಲ್ಲಿ ಡಾ. ಪ್ರಭಾಕರ ಕೋರೆ ಅವರಿಗೆ ವೀರಶೈವ ರತ್ನ, ಬೆಂಗಳೂರಿನ ಬಸವ ಸಮಿತಿಯ ಅಧ್ಯಕ್ಷ ಅರವಿಂದ ಜತ್ತಿ ಅವರಿಗೆ ಬಸವ ರತ್ನ, ಜಗದೀಶ ಶೆಟ್ಟರ್ ಅವರಿಗೆ ವೀರಶೈವ ಭೂಷಣ, ಮಾಜಿ ಶಾಸಕ ಅಶೋಕ್ ಖೇಣಿ ಅವರಿಗೆ ಪಂಚಾಚಾರ್ಯ ರತ್ನ ಹಾಗೂ ಪಂಢರಪುರ ದೇವಾಲಯದ ಅಧ್ಯಕ್ಷ ಗಹಿನಿನಾಥ ಮಹಾರಾಜ್ ಔಸೆಕರ್ ಅವರಿಗೆ ವಿಠ್ಠಲ ಸೇವಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಸಮಾರಂಭದ ಅಧ್ಯಕ್ಷತೆಯನ್ನು ಕರ್ನಾಟಕದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಹಾಗೂ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷರಾದ ಈಶ್ವರ ಬಿ. ಖಂಡ್ರೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಮಹಾರಾಷ್ಟ್ರ ವಿಧಾನಸಭೆಯ ಸಭಾಧ್ಯಕ್ಷ ರಾಹುಲ್ ನಾರ್ವೇಕರ್, ಕೇಂದ್ರದ ಮಾಜಿ ಸಚಿವ ಸುಶೀಲಕುಮಾರ್ ಶಿಂಧೆ, ಕರ್ನಾಟಕದ ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಜಗದೀಶ ಶೆಟ್ಟರ್, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಮಹಿಳಾ ಸಮಿತಿಯ ಅಧ್ಯಕ್ಷೆ ಉಮಾ ಬಿ. ನಾಯಕ್, ಮಹಾಸಭಾದ ಮಹಾರಾಷ್ಟ್ರ ಘಟಕದ ಅಧ್ಯಕ್ಷ ವಿಶ್ವನಾಥ ಬಿ. ಚಕೋಟೆ, ಕೆಎಲ್‌ಇ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಆ್ಯಂಡ್ ರಿಸರ್ಚ್‌ನ ಕುಲಾಧಿಪತಿ ಪದ್ಮಶ್ರೀ ಡಾ. ಪ್ರಭಾಕರ ಕೋರೆ ಸೇರಿದಂತೆ ಹಲವು ಗಣ್ಯರು ಭಾಗವಹಿಸಿದ್ದರು.

ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಬಸವರಾಜ ದೇಶಮುಖ, ಆಳಂದ ಶಾಸಕ ಬಿ.ಆರ್. ಪಾಟೀಲ, ಅಫಜಲಪುರ ಶಾಸಕ ಎಂ.ವೈ. ಪಾಟೀಲ, ಮಾಜಿ ಮಹಾಪೌರ ಹಾಗೂ ಮಹಾಸಭಾದ ಕಲಬುರಗಿ ಘಟಕದ ಅಧ್ಯಕ್ಷ ಶರಣು ಮೋದಿ, ಕರ್ನಾಟಕ ಮಹಾಸಭಾದ ಮಹಿಳಾ ಘಟಕದ ಅಧ್ಯಕ್ಷೆ ವೀಣಾ ಕಾಶಪ್ಪನವರ್, ಶರಣಬಸವ ವಿಶ್ವವಿದ್ಯಾಲಯದ ಕುಲಸಚಿವೆ ಡಾ. ಲಕ್ಷ್ಮೀ ಪಾಟೀಲ ಮಾಕಾ, ಹಣಕಾಸು ಅಧಿಕಾರಿ ಡಾ. ಕಿರಣ ಮಾಕಾ ಸೇರಿದಂತೆ ಹಲವಾರು ಗಣ್ಯರು ಉಪಸ್ಥಿತರಿದ್ದರು.

# ಖರ್ಗೆ ರ್‍ಯಾಲಿ ನಡೆಸಿದ 'ಸ್ಥಳ ಶುದ್ಧೀಕರಣ' ಬೀದರ್‌ನಲ್ಲಿ ಕಾಂಗ್ರೆಸ್ ಪ್ರತಿಭಟನೆ

ಬೀದರ್,ಆ.17-

ಎಐಸಿಸಿ ಅಧ್ಯಕ್ಷ ಹಾಗೂ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಭಾಷಣ ಮಾಡಿದ ಉತ್ತರಾಖಂಡದ ರಾಮಲೀಲಾ ಮೈದಾನವನ್ನು ಶುದ್ಧೀಕರಣ ಮಾಡಿರುವ ಘಟನೆಯನ್ನು ಖಂಡಿಸಿ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ನಗರದಲ್ಲಿ ಭಾನುವಾರ ಪ್ರತಿಭಟನೆ ನಡೆಯಿತು.

ನಗರದ ಅಂಬೇಡ್ಕರ್ ವೃತ್ತದಲ್ಲಿ ಕಾಂಗ್ರೆಸ್‌ನ ನೂರಾರು ಕಾರ್ಯಕರ್ತರು ಜಮಾಯಿಸಿ ಕೇಂದ್ರ ಹಾಗೂ ಉತ್ತರಾಖಂಡ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಇಂತಹ ಘಟನೆ ನಾಗರಿಕ ಸಮಾಜವೇ ತಲೆತಗ್ಗಿಸುವಂತದ್ದು ಎಂದು ಪ್ರತಿಭಟನಾಕಾರರು ಹೇಳಿದರು.

ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಬೀದರ್ ಸಂಸದ ಸಾಗರ್ ಖಂಡ್ರೆ ಮಾತನಾಡಿ, ಖರ್ಗೆ ಅವರು ದಲಿತ ಸಮುದಾಯಕ್ಕೆ ಸೇರಿದವರು ಎಂಬ ಕಾರಣಕ್ಕೆ ಅವರು ಭಾಷಣ ಮಾಡಿದ ಸ್ಥಳವನ್ನು ಶುದ್ಧೀಕರಣ ಮಾಡಲಾಗಿದೆ ಎಂದು ಆರೋಪಿಸಿದರು. ಈ ಕೃತ್ಯವನ್ನು ತೀವ್ರವಾಗಿ ಖಂಡಿಸುತ್ತೇವೆ.




ಘಟನೆಗೆ ಸಂಬಂಧಿಸಿದ ಕಾರ್ಯಕ್ರಮದ ಆಯೋಜಕರನ್ನು ಕೂಡಲೇ ಬಂಧಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ದೇಶಕ್ಕೆ ಸ್ವಾತಂತ್ರ್ಯ ದೊರೆತು 80 ವರ್ಷಗಳಾಗಿದ್ದು, ಡಾ. ಬಿ.ಆರ್. ಅಂಬೇಡ್ಕರ್ ಅವರು ದೇಶಕ್ಕೆ ಸಂವಿಧಾನ ನೀಡಿದ್ದಾರೆ. ಸಂವಿಧಾನದ ಆಶಯದಂತೆ ಸಮಾನತೆ ಹಾಗೂ ಅಸ್ಪೃಶ್ಯತೆ ನಿರ್ಮೂಲನೆಗಾಗಿ ಹೋರಾಟ ನಡೆಸಲಾಗುತ್ತಿದೆ. ಆದರೂ ಜಾತಿ ಮತ್ತು ಧರ್ಮದ ಹೆಸರಿನಲ್ಲಿ ಸಮಾಜದಲ್ಲಿ ವಿಭಜನೆ ಉಂಟುಮಾಡುವ ಪ್ರಯತ್ನಗಳು ನಡೆಯುತ್ತಿವೆ ಎಂದು ಅವರು ಆರೋಪಿಸಿದರು.

ರಾಜ್ಯಸಭೆಯಲ್ಲಿ ಖರ್ಗೆ ಅವರು ತಮಗೆ ಅನ್ಯಾಯವಾಗಿದೆ ಎಂದು ಧ್ವನಿ ಎತ್ತಿದ್ದರೂ ಸರ್ಕಾರದಿಂದ ಯಾವುದೇ ಸಮರ್ಪಕ ಪ್ರತಿಕ್ರಿಯೆ ಅಥವಾ ಕ್ರಮ ಕೈಗೊಳ್ಳಲಾಗಿಲ್ಲ. ವಿರೋಧ ಪಕ್ಷದ ನಾಯಕರಿಗೇ ಈ ರೀತಿಯ ಪರಿಸ್ಥಿತಿ ಎದುರಾದರೆ, ಸಾಮಾನ್ಯ ಜನರ ಗತಿ ಏನು ಎಂದು ಸಾಗರ್ ಖಂಡ್ರೆ ಪ್ರಶ್ನಿಸಿದರು.

ಘಟನೆಯ ಹೊಣೆ ಹೊತ್ತು ಉತ್ತರಾಖಂಡ ಮುಖ್ಯಮಂತ್ರಿ ರಾಜೀನಾಮೆ ನೀಡಬೇಕು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಒತ್ತಾಯಿಸಿದ್ದಾರೆ. ಅದೇ ನಮ್ಮ ಆಗ್ರಹವೂ ಆಗಿದ್ದು, ತಪ್ಪಿತಸ್ಥರನ್ನು ಬಂಧಿಸಿ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಮಾಜಿ ವಿಧಾನ ಪರಿಷತ್ ಸದಸ್ಯ ಕೆ. ಪುಂಡಲಿಕರಾವ್, ವಿಠ್ಠಲದಾಸ್ ಪ್ಯಾಗೆ, ಶ್ರೀಕಾಂತ್ ಸ್ವಾಮಿ, ಅನಿಲಕುಮಾರ್ ಬೇಲ್ದಾರ್, ವಿನೋದ್ ಅಪ್ಪೆ, ಚಂದ್ರಕಾಂತ್ ಹಾಗೂ ಬಸವರಾಜ್ ಮಾಳಗೆ ಸೇರಿದಂತೆ ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು.

# ಮಹಿಳಾ ಸಾಹಿತಿಗಳಿಗೆ ವೇದಿಕೆ, ಅಕಾಡೆಮಿಗಳಲ್ಲಿ ಸ್ಥಾನಮಾನ ಅಗತ್ಯ: ಶಕುಂತಲಾ ಪಾಟೀಲ ಜಾವಳಿ

ಕಲಬುರಗಿ,ಆ.17-

ಯಾವುದೇ ಸಮಾಜದ ಪ್ರಗತಿಗೆ ಸ್ತ್ರೀವಾದಿ ಸಾಹಿತ್ಯ ಪೂರಕವಾಗಿದ್ದು, ಮಹಿಳಾ ಸಾಹಿತಿಗಳಿಗೆ ಸೂಕ್ತ ವೇದಿಕೆ ಹಾಗೂ ಅಕಾಡೆಮಿಗಳಲ್ಲಿ ಸ್ಥಾನಮಾನ ದೊರೆಯಬೇಕು ಎಂದು ಕಲಬುರಗಿ ಜಿಲ್ಲಾ ಪ್ರಥಮ ಕಾವ್ಯ ಮಹಿಳಾ ಸಮ್ಮೇಳನದ ಸರ್ವಾಧ್ಯಕ್ಷೆ, ಹಿರಿಯ ಲೇಖಕಿ ಶಕುಂತಲಾ ಪಾಟೀಲ ಜಾವಳಿ ಹೇಳಿದರು.

ನಗರದ ಕನ್ನಡ ಭವನದ ಸುವರ್ಣ ಸಭಾಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ತಾಲೂಕು ಕಸಾಪ, ಅಖಿಲ ಕರ್ನಾಟಕ ರಾಜ್ಯ ಮಹಿಳಾ ನೌಕರರ ಸಂಘ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಆಶ್ರಯದಲ್ಲಿ ಭಾನುವಾರ ಆಯೋಜಿಸಿದ್ದ ಪ್ರಥಮ ಕಾವ್ಯ ಮಹಿಳಾ ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಲಬುರಗಿ ಜಿಲ್ಲೆಯಲ್ಲಿ ಮಹಿಳಾ ಬರಹಗಾರರ ಕೊರತೆಯಿಲ್ಲ. ಅವರ ಸಂವೇದನಾಶೀಲತೆ ಮತ್ತು ಅಧ್ಯಯನದಿಂದ ಕನ್ನಡ ಸಾಹಿತ್ಯ ಪರಂಪರೆ ಮತ್ತಷ್ಟು ಶ್ರೀಮಂತಗೊಳ್ಳುತ್ತಿದೆ. ಆದರೆ ಮಹಿಳಾ ಸಾಹಿತಿಗಳಿಗೆ ಸೂಕ್ತ ಅವಕಾಶ ಹಾಗೂ ವೇದಿಕೆ ದೊರೆಯುತ್ತಿಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಮಹಿಳಾ ವಚನಕಾರ್ತಿಯರ ಸ್ಮಾರಕಗಳು ಹಾಗೂ ದೇಗುಲಗಳ ಸಂರಕ್ಷಣೆಗೆ ಸರ್ಕಾರ ಕ್ರಮ ಕೈಗೊಳ್ಳಬೇಕು. ವಿಶ್ವವಿದ್ಯಾಲಯಗಳಲ್ಲಿ ಮಹಿಳಾ ಸಾಹಿತ್ಯ ಅಧ್ಯಯನ ಪೀಠಗಳನ್ನು ಆರಂಭಿಸಬೇಕು. ಜನಪದ ಸಾಹಿತ್ಯ ಕ್ಷೇತ್ರದ ಮಹಿಳಾ ಕಲಾವಿದರು ಹಾಗೂ ಸಂಗೀತಗಾರರಿಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು ಎಂದು ಆಗ್ರಹಿಸಿದರು.

ಕಲ್ಯಾಣ ಕರ್ನಾಟಕದ 371(ಜೆ) ಮೀಸಲಾತಿಯಡಿ ಮಹಿಳೆಯರಿಗೆ ವಿಶೇಷ ನೇಮಕಾತಿ ಕಲ್ಪಿಸಬೇಕು. ಮಹಾನಗರ ಪಾಲಿಕೆ ವ್ಯಾಪ್ತಿಯ ಪ್ರಮುಖ ರಸ್ತೆಗಳು ಹಾಗೂ ಬಡಾವಣೆಗಳಿಗೆ ಹಿರಿಯ ಮಹಿಳಾ ಸಾಹಿತಿಯರ ಹೆಸರಿಡುವ ಮೂಲಕ ಅವರ ಸಾಹಿತ್ಯ ಸೇವೆಯನ್ನು ಸ್ಮರಿಸಬೇಕು ಎಂದು ಶಕುಂತಲಾ ಪಾಟೀಲ ಜಾವಳಿ ಮನವಿ ಮಾಡಿದರು.



ಮಹಿಳಾ ಸಾಧಕಿಯರಿಗೆ ವಾತ್ಸಲ್ಯ ಕಾವ್ಯ ಗೌರವ :


ಮಹಿಳಾ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಹಿರಿಯ ಪತ್ರಕರ್ತೆ ಶೀಲಾ ಪಿ. ತಿವಾರಿ, ಡಾ. ಗಂಗಾ ಪೂಜಾರ, ಡಾ. ನಿರ್ಮಲಾ ಸಿ. ಕೆಳಮನಿ, ಪದ್ಮಿನಿ ಕಿರಣಗಿ, ಡಾ. ಶರಣಮ್ಮ ಬಿ. ಪಾಟೀಲ, ರಾಜೇಶ್ವರಿ ಸಾಹು, ಭವಾನಿ ಕಾಡ್ಲೂರ, ಮಾಲಾ ಕಮಲಾಪೂರ ಹಾಗೂ ಶಿಲ್ಪಾ ದಾಸ ಅವರನ್ನು ವಾತ್ಸಲ್ಯ ಕಾವ್ಯ ಗೌರವ ಪುರಸ್ಕಾರ ನೀಡಿ ಸತ್ಕರಿಸಲಾಯಿತು.

ಮರಳಿ ಅರಳುವ ಪರಿ ಗೋಷ್ಠಿಯಲ್ಲಿ ಮಹಿಳೆ ಮತ್ತು ಮೂಢನಂಬಿಕೆ ಕುರಿತು ಡಾ. ಶಿವಲೀಲಾ ಚಟ್ನಳ್ಳಿ ಹಾಗೂ ಸಮಾಜದ ಕಣ್ಣು ತೆರೆಸುವಲ್ಲಿ ಸ್ತ್ರೀವಾದಿ ಸಾಹಿತ್ಯದ ಪಾತ್ರ ಕುರಿತು ಡಾ. ಕಾವ್ಯಶ್ರೀ ಮಹಾಗಾಂವಕರ್ ಮಾತನಾಡಿದರು.

ಸಮ್ಮೇಳನದಲ್ಲಿ ಶಕ್ತಿ ಸಿಂಚನ ಕೃತಿ ಬಿಡುಗಡೆ, ಶಕ್ತಿ ಕವಿಗೋಷ್ಠಿ ಹಾಗೂ ವಿವಿಧ ಕವಯಿತ್ರಿಯರಿಂದ ಕವನ ವಾಚನ ನಡೆಯಿತು. ನೀತಾ ಡಿ. ಕಾಬಾ, ಮಂಜುಳಾ ಪಾಟೀಲ, ಪ್ರತಿಭಾ ಮಹಿಂದ್ರಕರ್ ಸಾವಿತ್ರಿ ಜನವಾಡಕರ್ ಕವಿತಾ ಕಾವಳೆ, ಫಾಳಮ್ಮ ಸಿಂಧೆ, ಮಹಾನಂದಾ ಹುಲಿ ಸೇರಿದಂತೆ ಹಲವು ಕವಯಿತ್ರಿಯರು ಭಾಗವಹಿಸಿದ್ದರು. ಹಿರಿಯ ಸಾಹಿತಿ ಪ್ರಮೀಳಾ ಜಾನಪ್ಪಗೌಡ ಸಮಾರೋಪ ನುಡಿಗಳನ್ನಾಡಿದರು. ಪ್ರಿಯಾಂಕಾ ಪಾಟೀಲ, ರೂಪಾ ಪೂಜಾರಿ ಹಾಗೂ ಭಾಗ್ಯಶ್ರೀ ಮರಗೋಳ ವೇದಿಕೆಯಲ್ಲಿದ್ದರು. ಕಾರ್ಯಕ್ರಮದಲ್ಲಿ ಜಗದೀಶ್ವರಿ ನಾಸಿ, ರೇಣುಕಾ ಡಾಂಗೆ, ನಂದಿನಿ ಸನಬಾಳ, ಶಿವಲೀಲಾ ಕಲಗುರ್ಕಿ, ಜಿಲ್ಲಾ ಕಸಾಪದ ಶಿವರಾಜ ಅಂಡಗಿ, ಧರ್ಮಣ್ಣ ಎಚ್. ಧನ್ನಿ, ಕೋಶಾಧ್ಯಕ್ಷ ಶರಣರಾಜ ಛಪ್ಪರಬಂದಿ, ಕುಪೇಂದ್ರ ಬರಗಾಲಿ, ವಿಶಾಲಾಕ್ಷಿ ಮಾಯಣ್ಣವರ್, ರಾಜೇಂದ್ರ ಮಾಡಬೂಳ, ಬಾಬುರಾವ ಪಾಟೀಲ, ಗಣೇಶ ಚಿನ್ನಾಕಾರ, ಎಸ್.ಕೆ. ಬಿರಾದಾರ, ಸುರೇಶ ಲೇಂಗಟಿ, ಸುರೇಶ ದೇಶಪಾಂಡೆ, ಭುವನೇಶ್ವರಿ ಹಳ್ಳಿಖೇಡ, ಶಾರದಾ ಆವಟೆ, ಮಾಯಾದೇವಿ ತುರಂ, ಜಗದೀಶ ಮರಪಳ್ಳಿ, ವಿದ್ಯಾಸಾಗರ ದೇಶಮುಖ, ಕಲ್ಯಾಣಕುಮಾರ ಶೀಲವಂತ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಬಳ್ಳಾರಿ ಜಿಲ್ಲಾ ನ್ಯಾಯಾಲಯದಲ್ಲಿ ಸಂಭ್ರಮದ ಸ್ವಾತಂತ್ರ್ಯ ದಿನಾಚರಣೆ

# ವಿಕಸಿತ ಭಾರತ ನಿರ್ಮಾಣಕ್ಕೆ ಯುವಶಕ್ತಿ ಶ್ರಮಿಸಲು ನ್ಯಾಯಾಧೀಶ ಸಿದ್ಧಲಿಂಗ ಪ್ರಭು ಕರೆ




ಬಳ್ಳಾರಿ,ಆ.17-

ನಗರದ ತಾಳೂರು ರಸ್ತೆಯಲ್ಲಿರುವ ಜಿಲ್ಲಾ ನ್ಯಾಯಾಲಯ ಸಂಕೀರ್ಣದಲ್ಲಿ ಶನಿವಾರದಂದು 80ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಅತ್ಯಂತ ಸಡಗರ-ಸಂಭ್ರಮದಿಂದ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಸಿದ್ದಲಿಂಗ ಪ್ರಭು ಅವರು ಧ್ವಜಾರೋಹಣ ನೆರವೇರಿಸಿ, ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯಗಳನ್ನು ಕೋರಿದರು.

ಧ್ವಜಾರೋಹಣದ ನಂತರ ಮಾತನಾಡಿದ ನ್ಯಾಯಾಧೀಶ ಸಿದ್ದಲಿಂಗ ಪ್ರಭು ಅವರು, ಐತಿಹಾಸಿಕ 'ವಂದೇ ಮಾತರಂ' ಗೀತೆಗೆ ಈ ವರ್ಷಕ್ಕೆ 150 ವರ್ಷಗಳು ಪೂರ್ಣಗೊಳ್ಳುತ್ತಿವೆ. ಈ ವರ್ಷದಿಂದ ರಾಷ್ಟ್ರಗೀತೆ ಹಾಡುವುದಕ್ಕೂ ಮುನ್ನ ವಂದೇ ಮಾತರಂ ಗೀತೆಯನ್ನು ಹಾಡುವ ಸತ್ಸಂಪ್ರದಾಯವನ್ನು ನಾವು ರೂಢಿಸಿಕೊಳ್ಳುತ್ತಿದ್ದೇವೆ. ಈ ಗೀತೆ ಪ್ರತಿಯೊಬ್ಬ ಭಾರತೀಯನಲ್ಲೂ ದೇಶಭಕ್ತಿಯನ್ನು ಇಮ್ಮಡಿಗೊಳಿಸುತ್ತದೆ ಎಂದು ಸ್ಮರಿಸಿದರು.

ಮುಂದಿನ ಕೆಲವೇ ದಶಕಗಳಲ್ಲಿ ನಮ್ಮ ದೇಶವು ಸ್ವಾತಂತ್ರ್ಯದ ಶತಮಾನೋತ್ಸವವನ್ನು ಆಚರಿಸಲಿದೆ. ಈ ನಿಟ್ಟಿನಲ್ಲಿ 'ಯುವಶಕ್ತಿ ಮೂಲಕ ವಿಕಸಿತ ಭಾರತ 2047' ( - 2047) ಎಂಬ ಮಹತ್ವದ ಗುರಿಯನ್ನು ದೇಶದ ಮುಂದಿಡಲಾಗಿದೆ. ದೇಶದಲ್ಲಿ ಲಭ್ಯವಿರುವ ಆಧುನಿಕ ತಂತ್ರಜ್ಞಾನ ಹಾಗೂ ಎಲ್ಲಾ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು, ಭಾರತವನ್ನು ಜಾಗತಿಕ ಮಟ್ಟದಲ್ಲಿ ಅಗ್ರಸ್ಥಾನದಲ್ಲಿ ಮುಂಚೂಣಿಯಲ್ಲಿ ನಿಲ್ಲಿಸುವುದು ಯುವಪೀಳಿಗೆಯ ಆದ್ಯ ಕರ್ತವ್ಯವಾಗಿದೆ. ಈ ಗುರಿ ಸಾಧನೆಗಾಗಿ ಯುವಜನತೆ ಪಣತೊಟ್ಟು ಶ್ರಮಿಸಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಪಿ. ರಾಮಬ್ರಹ್ಮಂ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್. ಹೊಸಮನೆ ಸೇರಿದಂತೆ ವಿವಿಧ ನ್ಯಾಯಾಲಯಗಳ ನ್ಯಾಯಾಧೀಶರು, ವಕೀಲರು ಹಾಗೂ ನ್ಯಾಯಾಂಗ ಇಲಾಖೆಯ ಅಧಿಕಾರಿ-ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



## ಕಲ್ ತಾವರಗೇರಾ ಗ್ರಾಮ ಪಂಚಾಯತಿಯಿಂದ 80ನೇ ರಾಷ್ಟ್ರ ಧ್ವಜಾರೋಹಣ ಕಾರ್ಯಕ್ರಮ ಆಯೋಜನೆ

ಕೊಪ್ಪಳ,ಆ.16-

ತಾಲೂಕಿನ ಕಲ್ ತವರಗೇರಾ ಗ್ರಾಮ ಪಂಚಾಯತಿಯ ಕಲ್ ತವರಗೇರಾ ಓಬಲಪ್ಪ ಅಮೃತ ಸರೋವರ ಕೆರೆ ದಡದಲ್ಲಿ 80ನೇ ವರ್ಷದ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಮಾಜಿ ಸೈನಿಕರಾದ ದಲ್ಜಿತ್ ಸಿಂಗ್ ರಾಷ್ಟ್ರ ಧ್ವಜರೋಹಣ ನೆರವೇರಿಸಿ ಮಾತನಾಡಿದರು.

ಅಮೃತ ಸರೋವರ ಗ್ರಾಮದ ನೀರಿನ ದಾಹ ತೀರಿಸುವ ತಾಣಗಳಾಗಿವೆ. ಭಾರತ ಸರ್ಕಾರವು ಗ್ರಾಮದ ಕೆರೆಗಳನ್ನು ನರೇಗಾ ಯೋಜನೆಯಡಿ ಅಭಿವೃದ್ದಿಪಡಿಸಿ ಸುಂದರ ತಾಣಗಳನ್ನಾಗಿ ನಿರ್ಮಿಸಿ ಆ ಮೂಲಕ ಜಲಸಂರಕ್ಷಣೆ ಕೈಗೊಳ್ಳುತ್ತಿರುವದು ನಿಜಕ್ಕೂ ಶ್ಲಾಘನೀಯ. ಬೇಸಿಗೆ ಕಾಲದಲ್ಲಿ ಜಾನುವಾರುಗಳಿಗೆ ಕುಡಿಯಲು ಅನುಕೂಲವಾಗುತ್ತದೆ. ಕೆರೆಯ ಸುತ್ತಲೂ ರೈತರ ಜಮೀನುಗಳಿಗೆ ನೀರು ಇಂಗುವದರಿಂದ ರೈತರ ಕೊಳವೆ ಬಾವಿಗಳು ಮರುಪೂರಣಗೊಳ್ಳುತ್ತವೆ. ಮುಂದಿನ ಪೀಳಿಗೆಗೆ ಕುಡಿಯಲು ನೀರು ದೊರಕಬೇಕಾದರೆ ಕೆರೆಗಳನ್ನು ಉಳಿಸಿ ಬಳಸಿಕೊಂಡು ಹೋದಲ್ಲಿ ಮಾತ್ರ ಸಾಧ್ಯವೆಂದರು. ಇದೇ ಸಂದರ್ಭದಲ್ಲಿ ವಿಬಿಜೀ ರಾಮ್ ಜೀ ಯೋಜನೆಯಡಿ ಹೊಸದಾಗಿ ನೊಂದಣಿ ಮಾಡಿಕೊಂಡ ಶ್ರೀನಿವಾಸ ಇಳಿಗೇರ, ವಿಶೇಷಚೇತನ ಫಕೀರಪ್ಪ ಪರತಮಲ್ಲಯ್ಯ ಇವರಿಗೆ ಗ್ರಾಮೀಣ ರೋಜಗಾರ್ ಗ್ಯಾರಂಟಿ ಕಾರ್ಡಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹನಮಂತಪ್ಪ ನಾಯಕ ಗ್ರಾಮ ಪಂಚಾಯತಿ ಕಾರ್ಯದರ್ಶಿ ಸುರೇಶ ಗೌಡ, ಮಾಜಿ ಗ್ರಾಮ ಪಂಚಾಯತ ಸದಸ್ಯರು, ಗ್ರಾಮಸ್ಥರು, ವಿವಿಧ ಸಂಘದ ಪದಾಧಿಕಾರಿಗಳು, ಕರವಸೂಲಿಗಾರ ನಾಗರಾಜ,ಗಣಕ ಯಂತ್ರ ನಿರ್ವಾಹಕ ಲಕ್ಷ್ಮಣ್ ಹಿರೇಮನಿ, ಗ್ರಾಮ ಕಾಯಕ ಮಿತ್ರ ಯಂಕಮ್ಮ, ಮಲ್ಲಪ್ಪ ಎಸ್ ಭೀಮನೂರ್ ಹಾಗೂ ಗ್ರಾಮ ಪಂಚಾಯಿತಿ ಸರ್ವ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ಜಾನಪದ ಕಲೆ, ಸಂಸ್ಕೃತಿ ಉಳಿಸುವುದು ಪ್ರತಿಯೊಬ್ಬರ ಕರ್ತವ್ಯ: ಸಚಿವ ಈಶ್ವರ್ ಖಂಡ್ರೆ

ಬೀದರ್,ಆ.17-

ನಮ್ಮ ನಾಡಿನ ಕಲೆ, ಸಂಸ್ಕೃತಿ ಹಾಗೂ ಜಾನಪದ ಪರಂಪರೆಯನ್ನು ಉಳಿಸಿ ಬೆಳೆಸುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಿದೆ. ಕಲಾವಿದರಿಗೆ ಆರ್ಥಿಕ ಭದ್ರತೆ ಕಲ್ಪಿಸುವುದರ ಜೊತೆಗೆ ಅವರ ಪ್ರತಿಭೆಗೆ ಸೂಕ್ತ ಪ್ರೋತ್ಸಾಹ ನೀಡಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ್ ಖಂಡ್ರೆ ಹೇಳಿದರು.

ನಗರದ ಡಾ. ಚನ್ನಬಸವ ಪಟ್ಟದೇವರು ಜಿಲ್ಲಾ ರಂಗಮಂದಿರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಶನಿವಾರ ಆಯೋಜಿಸಿದ್ದ ಹರ್ ಘರ್ ತಿರಂಗಾ ಹಾಗೂ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಜಿಲ್ಲೆಯ ಕಲಾವಿದರಿಗೆ ಗುರುತಿನ ಚೀಟಿ ವಿತರಣೆ ಸಮಾರಂಭವನ್ನು ಡೊಳ್ಳು ಬಾರಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಜಾನಪದ ಸಾಹಿತ್ಯವು ಪೂರ್ವಜರಿಂದ ಬಾಯಿಂದ ಬಾಯಿಗೆ ಹಾಗೂ ತಲೆಮಾರಿನಿಂದ ತಲೆಮಾರಿಗೆ ಹರಿದು ಬಂದಿರುವ ಅಮೂಲ್ಯ ಪರಂಪರೆಯಾಗಿದೆ. ಹಿರಿಯರು ಹಂತಿ ಪದ, ಸೋಬಾನ ಪದ, ತತ್ವಪದ ಸೇರಿದಂತೆ ಹಲವು ಜಾನಪದ ಸಾಹಿತ್ಯ ಪ್ರಕಾರಗಳನ್ನು ರಚಿಸಿ, ಹಾಡುವ ಮೂಲಕ ಸಂಸ್ಕೃತಿಯನ್ನು ಜೀವಂತವಾಗಿಟ್ಟಿದ್ದಾರೆ. ಕಲೆ ದೇವರು ನೀಡಿದ ವರವಾಗಿದ್ದು, ಕಲಾವಿದರನ್ನು ಗೌರವಿಸಿ ಪ್ರೋತ್ಸಾಹಿಸುವುದು ಸಮಾಜದ ಜವಾಬ್ದಾರಿಯಾಗಿದೆ ಎಂದರು.

ಜಿಲ್ಲೆಯ 1,406 ಕಲಾವಿದರಿಗೆ ಗುರುತಿನ ಚೀಟಿ ವಿತರಿಸುತ್ತಿರುವುದು ಶ್ಲಾಘನೀಯ. ಇದರಿಂದ ಕಲಾವಿದರನ್ನು ಗುರುತಿಸುವುದರ ಜೊತೆಗೆ ಸರ್ಕಾರದ ವಿವಿಧ ಸೌಲಭ್ಯಗಳನ್ನು ಅರ್ಹರಿಗೆ ತಲುಪಿಸಲು ಸಹಕಾರಿಯಾಗಲಿದೆ ಎಂದು ಹೇಳಿದರು.




ಆಧುನಿಕ ಜೀವನಶೈಲಿಯತ್ತ ಯುವಜನತೆ ಹೆಚ್ಚು ಆಕರ್ಷಿತರಾಗುತ್ತಿರುವುದರಿಂದ ಸಾಂಪ್ರದಾಯಿಕ ಕಲೆ, ಸಂಸ್ಕೃತಿ ಹಾಗೂ ಮೌಲ್ಯಗಳು ನಿಧಾನವಾಗಿ ಮರೆಯಾಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಇದನ್ನು ತಡೆಯಲು ಜಾನಪದ ಗೀತೆಗಳು, ತತ್ವಪದಗಳು ಹಾಗೂ ಸತ್ಸಂಗದಂತಹ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಜನರು ಹೆಚ್ಚು ತೊಡಗಿಸಿಕೊಳ್ಳಬೇಕು ಎಂದು ಕರೆ ನೀಡಿದರು. ಕಲಾವಿದರ ಬಡಾವಣೆ ನಿರ್ಮಾಣಕ್ಕೆ ಕ್ರಮ : ವಸತಿ ಸೌಲಭ್ಯವಿಲ್ಲದ ಕಲಾವಿದರು ಅರ್ಜಿ ಸಲ್ಲಿಸಬೇಕು. ಕಲಾವಿದರ ಬಹುದಿನಗಳ ಬೇಡಿಕೆಯಾಗಿರುವ ಕಲಾವಿದರ ಬಡಾವಣೆ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುವುದು. ಕಲಾವಿದರ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಬದ್ಧವಾಗಿದೆ ಎಂದು ಈಶ್ವರ್ ಖಂಡ್ರೆ ಭರವಸೆ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಲಬುರಗಿ ವಿಭಾಗದ ಜಂಟಿ ನಿರ್ದೇಶಕ ಬಸವರಾಜ್ ಹೂಗಾರ್ ಮಾತನಾಡಿ, ಬೀದರ್ ಶರಣರ ನಾಡಾಗಿದ್ದು, ವಚನ ಸಾಹಿತ್ಯ ಹಾಗೂ ಶರಣ ಪರಂಪರೆಗೆ ವಿಶೇಷ ಸ್ಥಾನವಿದೆ. ಈ ಶ್ರೀಮಂತ ಪರಂಪರೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಹಾಗೂ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಸರ್ಕಾರ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಉದ್ದೇಶಿಸಿದೆ ಎಂದರು. ಕಾರ್ಯಕ್ರಮದಲ್ಲಿ ಜಿಲ್ಲೆಯ 1,406 ಕಲಾವಿದರಿಗೆ ಗುರುತಿನ ಚೀಟಿ ವಿತರಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಶಾಸಕ ರಹೀಮ್ ಖಾನ್ ಅವರು ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಗಿರೀಶ್ ಬದೋಲೆ, ಬೀದರ್ ಮಹಾನಗರ ಪಾಲಿಕೆ ಆಯುಕ್ತ ಮುಕುಲ್ ಜೈನ್, ಅಪರ ಜಿಲ್ಲಾಧಿಕಾರಿ ಸುರೇಖಾ, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಚಂದ್ರಕಾಂತ್ ಪೂಜಾರಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಜಿಲ್ಲಾಧ್ಯಕ್ಷ ಸುರೇಶ್ ಚನ್ನಶೆಟ್ಟಿ, ಕರ್ನಾಟಕ ಜಾನಪದ ಅಕಾಡೆಮಿಯ ಸದಸ್ಯ ವಿಜಯಕುಮಾರ್ ಸೋನಾರೆ ಹಾಗೂ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಸಂಜೀವಕುಮಾರ್ ಅತಿವಾಳೆ ವೇದಿಕೆಯಲ್ಲಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಿದ್ರಾಮ್ ಸಿಂಧೆ ಸ್ವಾಗತಿಸಿದರು. ಚನ್ನಬಸವ ಹೇಡೆ ನಿರೂಪಿಸಿದರು. ಕ್ರೈಮೆಂಟಿನಾ ವಂದಿಸಿದರು.

## ವಂದೇ ಮಾತರಂ ಗೀತೆಗೆ ಅಗೌರವ ಆರೋಪ: ಹೊಸಪೇಟೆಯಲ್ಲಿ ಬಿಜೆಪಿ ಯುವ ಮೋರ್ಚಾ ಪ್ರತಿಭಟನೆ



ಹೊಸಪೇಟೆ,ಆ.17-

ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ವಂದೇ ಮಾತರಂ ರಾಷ್ಟ್ರೀಯ ಗೀತೆಗೆ ಕಾಂಗ್ರೆಸ್‌ನ ಹಿರಿಯ ನಾಯಕರು ಅಗೌರವ ತೋರಿದ್ದಾರೆ ಎಂದು ಆರೋಪಿಸಿ ವಿಜಯನಗರ ಜಿಲ್ಲಾ ಬಿಜೆಪಿ ಯುವ ಮೋರ್ಚಾ ವತಿಯಿಂದ ನಗರದ ಪುನೀತ್ ವೃತ್ತದಲ್ಲಿ ರವಿವಾರ ಪ್ರತಿಭಟನೆ ನಡೆಯಿತು.

ದೆಹಲಿಯ ಎಐಸಿಸಿ ಕಚೇರಿಯಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ವಂದೇ ಮಾತರಂ ಗೀತೆ ಗಾಯನದ ವೇಳೆ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಡೆ ಖಂಡನೀಯ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯ ನೇತೃತ್ವ ವಹಿಸಿದ್ದ ಬಿಜೆಪಿ ಯುವ ಮೋರ್ಚಾ ಜಿಲ್ಲಾ ಅಧ್ಯಕ್ಷ ಕಿಚಿಡಿ ಕೊಟ್ರೇಶ್ ಮಾತನಾಡಿ, ''ವಂದೇ ಮಾತರಂ ದೇಶದ ಹೆಮ್ಮೆ ಹಾಗೂ ದೇಶಭಕ್ತಿಯ ಸಂಕೇತ. ರಾಷ್ಟ್ರೀಯ ಭಾವನೆಗಳಿಗೆ ಧಕ್ಕೆ ತರುವ ಯಾವುದೇ ರೀತಿಯ ವರ್ತನೆಯನ್ನು ಸಹಿಸಲು ಸಾಧ್ಯವಿಲ್ಲ. ರಾಜಕೀಯ ಕಾರಣಗಳಿಗಾಗಿ ಇಂತಹ ವರ್ತನೆಗಳನ್ನು ಸಮರ್ಥಿಸಿಕೊಳ್ಳಬಾರದು'' ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಕಾರ್ಯಕರ್ತರು ಕಾಂಗ್ರೆಸ್ ನಾಯಕರ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಯುವ ಮೋರ್ಚಾ ಜಿಲ್ಲಾ ಉಪಾಧ್ಯಕ್ಷರಾದ ಸೂರಿ ಬಂಗಾರು, ಪ್ರಿಯಾ ಕೆಮ್ಮಣ್ಣನವರ್, ಎಚ್. ರವಿಕಿರಣ್, ಪ್ರಧಾನ ಕಾರ್ಯದರ್ಶಿ ಸಚಿನ್ ಕುಮಾರ್, ಮಂಡಲ ಪ್ರಧಾನ ಕಾರ್ಯದರ್ಶಿ ಮಧುರಚೆನ್ನಶಾಸ್ತ್ರೀ, ಗೌಳಿ ಬಸವರಾಜ್ ಸೇರಿದಂತೆ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

## ಒಂದನೇಯ ಪುಟದಿಂದ

### ಬಿಜೆಪಿಯ ಹೊಸ ತಂಡ ರೆಡಿ: ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ ಬಿಎಲ್ : ಮಹಿಳೆಯರಿಗೆ ಹೆಚ್ಚಿನ ಆದ್ಯತೆ

ರಾಜನಾಥ್ ಸಿಂಗ್ ಅಮಿತ್ ಶಾ, ಜೆ.ಪಿ. ನಡ್ಡಾ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯುರಪ್ಪ

ಕೇಂದ್ರ ಸಚಿವ ಸರ್ಬಾನಂದ ಸೋನೋವಾಲ್ ಒಬಿಸಿ ಸೆಲ್ ಮುಖ್ಯಸ್ಥ ಕೆ. ಲಕ್ಷ್ಮಣ್ ಪಂಜಾಬ್‌ನ ಇಕ್ಬಾಲ್ ಸಿಂಗ್ ಲಾಲ್‌ಪುರ ಹರಿಯಾಣದ ಸುಧಾ ಯಾದವ್

ಮಧ್ಯಪ್ರದೇಶದ ನಾಯಕ ಸತ್ಯನಾರಾಯಣ್ ಜತಿಯಾ

ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್. ಸಂತೋಷ್.

ಇನ್ನು ಕೇಂದ್ರ ಚುನಾವಣಾ ಸಮಿತಿ ಇದ್ದು, ಇದರಲ್ಲಿ 12 ಸಂಸದೀಯ ಮಂಡಳಿ ಸದಸ್ಯರು ಮತ್ತು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್, ಕೇಂದ್ರ ಸಚಿವ ಭೂಪೇಂದರ್ ಯಾದವ್ ಮತ್ತು ಬಿಜೆಪಿ ಮಹಿಳಾ ಮೋರ್ಚಾದ ಮುಖ್ಯಸ್ಥೆ ವನತಿ ಶ್ರೀನಿವಾಸನ್ ಸೇರಿದ್ದಾರೆ.

### ಆಗಸ್ಟ್ 20ಕ್ಕೆ ದೇವರಾಜ ಅರಸು ಜಯಂತಿ: ಅದ್ದೂರಿ ಆಚರಣೆಗೆ ಸಿದ್ಧತೆ ಸೆಪ್ಟೆಂಬರ್‌ನಲ್ಲಿ ಅರಸು ಪ್ರತಿಮೆ ಅನಾವರಣಕ್ಕೆ ಸಿದ್ಧತೆ; ಸ್ಮಾರಕ ಭವನ ನಿರ್ಮಾಣಕ್ಕೂ ಪ್ರಯತ್ನ ಕೆ. ಶಾಂತಪ್ಪ

ಆಶಯಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಉದ್ದೇಶದಿಂದ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಹೇಳಿದರು.

ಸೆಪ್ಟೆಂಬರ್‌ನಲ್ಲಿ ಪ್ರತಿಮೆ ಅನಾವರಣ

ಮುಂದಿನ ಸೆಪ್ಟೆಂಬರ್ ತಿಂಗಳಲ್ಲಿ 13 ಅಥವಾ 15ರಂದು ಡಿ. ದೇವರಾಜ ಅರಸು ಅವರ ಪ್ರತಿಮೆ ಅನಾವರಣಗೊಳಿಸಲು ಸಿದ್ಧತೆ ನಡೆಸಲಾಗುತ್ತಿದೆ. ಪ್ರತಿಮೆ ಅನಾವರಣ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಹಾಗೂ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಹ್ವಾನಿಸಿ, ಅವರ ಸಮ್ಮುಖದಲ್ಲಿ ಕಾರ್ಯಕ್ರಮ ನಡೆಸಲು ಪ್ರಯತ್ನಿಸಲಾಗುವುದು ಎಂದು ಕೆ. ಶಾಂತಪ್ಪ ಹೇಳಿದರು.

ಅರಸು ಸ್ಮಾರಕ ಭವನ ನಿರ್ಮಾಣಕ್ಕೆ ಒತ್ತು

ರಾಯಚೂರಿನಲ್ಲಿ ಡಿ. ದೇವರಾಜ ಅರಸು ಅವರ ಸ್ಮರಣಾರ್ಥ ಸ್ಮಾರಕ ಭವನ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಸರ್ಕಾರದ ಗಮನ ಸೆಳೆಯಲಾಗುವುದು. ಹಿಂದುಳಿದ ವರ್ಗಗಳು, ಶೋಷಿತರು ಹಾಗೂ ಸಾಮಾಜಿಕವಾಗಿ ಹಿಂದುಳಿದ ಸಮುದಾಯಗಳ ಅಭಿವೃದ್ಧಿಗೆ ಅರಸು ಅವರು ನೀಡಿದ ಕೊಡುಗೆಗಳನ್ನು ಸ್ಮರಿಸುವುದರ ಜೊತೆಗೆ, ಅವರ ವಿಚಾರಧಾರೆಗಳನ್ನು ಯುವಜನತೆಗೆ ತಲುಪಿಸುವ ಕೆಲಸವಾಗಬೇಕು ಎಂದು ಅವರು ಹೇಳಿದರು.

ಜಯಂತಿ ಕಾರ್ಯಕ್ರಮಕ್ಕೆ ಹಿಂದುಳಿದ ವರ್ಗಗಳ ಮುಖಂಡರು, ಸಂಘಟನೆಗಳ ಪದಾಧಿಕಾರಿಗಳು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಪ್ರಧಾನ ಕಾರ್ಯದರ್ಶಿ ಕೆ. ಹನುಮಂತಪ್ಪ ಯಾದವ್, ನಗರ ಘಟಕದ ಅಧ್ಯಕ್ಷ ಬಿ. ನರಸಿಂಹ ರೆಡ್ಡಿ, ಡಾ. ಶಾಮಣ್ಣ ಮಾಚನೂರು, ಸುರೇಖಾ, ನರಸಿಂಹಲು, ತಾಲೂಕು ಘಟಕದ ಅಧ್ಯಕ್ಷ ನಾರಾಯಣ, ವೆಂಕಟೇಶ್ ಮಡಿವಾಳ ಹಾಗೂ ವಿಜಯ ಭಾಸ್ಕರ ರೆಡ್ಡಿ ಉಪಸ್ಥಿತರಿದ್ದರು.

### ನೂಲಿಯ ಚಂದಯ್ಯ ಜಯಂತಿ ಆ.28ರಂದು :ಹುಲಿಗೆಪ್ಪ

ಜಯಂತಿ ಅಂಗವಾಗಿ ಶೇ.80ಕ್ಕಿಂತ ಅಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಗುವುದು. ನಿವೃತ್ತ ಸರ್ಕಾರಿ ನೌಕರರು, ಬಡ್ತಿ ಹೊಂದಿದವರು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದವರನ್ನೂ ಗೌರವಿಸಲಾಗುವುದು ಎಂದು ಹೇಳಿದರು.

ಕೊರಮ, ಕೊರಚ, ಕೊರವ, ಕುಳುವ ಹಾಗೂ ಭಂಗಿ ಸಮುದಾಯಗಳ ಒಗ್ಗಟ್ಟು ಮತ್ತು ಸಾಮಾಜಿಕ ಅಭಿವೃದ್ಧಿಗೆ ಜಯಂತ್ಯೋತ್ಸವ ವೇದಿಕೆಯಾಗಬೇಕು. ನೂಲಿಯ ಚಂದಯ್ಯನವರ ಕಾಯಕ, ದಾಸೋಹ ಹಾಗೂ ಸಾಮಾಜಿಕ ಸಂದೇಶವನ್ನು ಯುವ ಪೀಳಿಗೆಗೆ ಪರಿಚಯಿಸುವ ಉದ್ದೇಶದಿಂದ ಕಾರ್ಯಕ್ರಮ ಆಯೋಜಿಸಲಾಗಿದೆ. ಸಮಾಜದ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಜಯಂತಿಯನ್ನು ಯಶಸ್ವಿಗೊಳಿಸಬೇಕು ಎಂದು ಹುಲಿಗೆಪ್ಪ ಮಾಣಿಕ್ ಮನವಿ ಮಾಡಿದರು.ಸುದ್ದಿಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ಈರಣ್ಣ ಮಂಗಳಾಯ, ಈರಣ್ಣ ಸಾತಪಲಿ, ಬೂದೆಪ್ಪ, ನರಸಿಂಹಲು ಕಮಲಾಪುರ, ಮಾಲಾ ಬಜಂತ್ರಿ, ನರಸಪ್ಪ, ತಿಮ್ಮಪ್ಪ ತಡಕಲ ಸೇರಿದಂತೆ ಜಿಲ್ಲಾ ಹಾಗೂ ತಾಲೂಕು ಘಟಕಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

### ವಟಗಲ್ ಗ್ರಾಮದಲ್ಲಿ ಉಚಿತ ಬೃಹತ್ ಆರೋಗ್ಯ ಶಿಬಿರ: 628 ಜನರಿಗೆ ಉಚಿತ ವೈದ್ಯಕೀಯ ಸೇವೆ

ಸಾರ್ವಜನಿಕರ ವಿಶೇಷ ಮೆಚ್ಚುಗೆಗೆ ಪಾತ್ರವಾಯಿತು.

ಈ ಉಚಿತ ಆರೋಗ್ಯ ಶಿಬಿರದಲ್ಲಿ ವಟಗಲ್ ಹಾಗೂ ಸುತ್ತಮುತ್ತಲಿನ ಗ್ರಾಮಗಳ 628ಕ್ಕೂ ಹೆಚ್ಚು ಸಾರ್ವಜನಿಕರು ನುರಿತ ವೈದ್ಯರಿಂದ ಉಚಿತ ತಪಾಸಣೆ ಮತ್ತು ವೈದ್ಯಕೀಯ ಸೇವೆ ಪಡೆದರು.

ಶಾರದಾ ಪಬ್ಲಿಕ್ ಶಾಲೆಯ ಅಧ್ಯಕ್ಷ ಮಂಜುನಾಥ ಸ್ವಾಮಿ ತೋರಣದಿನ್ನಿ ಸ್ವಾಗತಿಸಿದರು. ವಿದ್ಯಾರ್ಥಿನಿ ಪಲ್ಲವಿ ಪ್ರಾರ್ಥಿಸಿದರು ಹಾಗೂ ಶಿವನಗೌಡ ಕಾರ್ಯಕ್ರಮ ನಿರೂಪಿಸಿದರು.

ಕಾರ್ಯಕ್ರಮದಲ್ಲಿ ದೇವಸ್ಥಾನ ಸಮಿತಿ ಅಧ್ಯಕ್ಷ ಮಲ್ಲಿಕಾರ್ಜುನ ಕಡಬೂರು, ಡಾ. ಸಿದ್ಧರಾಮಪ್ಪ ಸಾಹುಕಾರ್, ಡಾ. ರುದ್ರಗೌಡ ಪೊಲೀಸ್ ಪಾಟೀಲ್, ಗ್ರಾಮ ಪಂಚಾಯತಿ ಅಧ್ಯಕ್ಷ ಬಸನಗೌಡ ಬಾಲರೆಡ್ಡಿ, ಶಿವಕುಮಾರ ಪಾಟೀಲ್, ಬಲವಂತರಾಯ ವಟಗಲ್, ರಾಮರೆಡ್ಡಿ ಕೆ, ಸಾಹಿತಿ ವೆಂಕನಗೌಡ ವಟಗಲ್, ಶಂಕರಗೌಡ ಸಾನಬಾಳ, ಮಲ್ಲನಗೌಡ, ಬಸವರಾಜ ಪಾಟೀಲ್, ಅಮರೇಶ ಸಾನಬಾಳ, ಅದ್ವಿಕಾ ನರ್ಸಿಂಗ್ ಕಾಲೇಜಿನ ಕಾರ್ಯದರ್ಶಿ ಡಾ. ಅಂಬಿಕಾ ಎಂ. ವಟಗಲ್, ಸ್ಥಳೀಯ ಪ್ರಮುಖರು ಹಾಗೂ ವೈದ್ಯರ ತಂಡ ಉಪಸ್ಥಿತರಿದ್ದು ಶಿಬಿರದ ಯಶಸ್ಸಿಗೆ ಶ್ರಮಿಸಿದರು.

### ವಟಗಲ್‌ನಲ್ಲಿ ಶ್ರೀ ಗಿರಿಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ಸಂಘ ಉದ್ಘಾಟನೆ

ಪಾಟೀಲ್, ಹಿರಿಯ ಪತ್ರಕರ್ತ ಮಂಜುನಾಥ ಬಳ್ಳಾರಿ ಶಿವಕುಮಾರ್ ಪಾಟೀಲ್, ಮಲ್ಲಿಕಾರ್ಜುನ್ ಕಡಬುರ, ಬಸವರಾಜ್ ಬುಂಕಲದೊಡ್ಡಿ, ವೆಂಕನಗೌಡ ವಟಗಲ್, ಶಿವರಾಜಪ್ಪ ಗೌಡ, ಗ್ರಾಮ ಪಂಚಾಯತಿ ಅಧ್ಯಕ್ಷರಾದ ಬಸನಗೌಡ ಬಾಲರೆಡ್ಡಿ, ಸಹಕಾರಿ ಸಂಘದ ಉಪಾಧ್ಯಕ್ಷರಾದ ಗುಂಡಪ್ಪ ಗೌಡ ಹಾಗೂ ಸಂಘದ ಎಲ್ಲಾ ಆಡಳಿತ ಮಂಡಳಿಯ ನಿರ್ದೇಶಕರು ಉಪಸ್ಥಿತರಿದ್ದರು.

ಕಾರ್ಯಕ್ರಮದ ನಿರೂಪಣೆಯನ್ನು ವಿಜಯಕುಮಾರ್ ಪಾಟೀಲ್ ಅತ್ಯಂತ ಅಚ್ಚುಕಟ್ಟಾಗಿ ನಡೆಸಿಕೊಟ್ಟರು. ಗ್ರಾಮಸ್ಥರು ಹಾಗೂ ಸಹಕಾರಿ ಕ್ಷೇತ್ರದ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

## ಪಂಚಗ್ಯಾರಂಟಿ ಯೋಜನೆಗಳ ಲೋಪ ಸರಿಪಡಿಸಲು ಕ್ರಮ ವಹಿಸಿ - ಬ್ರಿಜೇಶ ಪಾಟೀಲ್

ಸಿರವಾರ,ಆ.17-

ಸರಕಾರದ ಮಹತ್ವಾಕಾಂಕ್ಷಿ ಪಂಚ ಗ್ಯಾರಂಟಿ ಯೋಜನೆಗಳು ಜನರಿಗೆ ಅನುಕೂಲವಾಗಿವೆ. ಆದರೆ, ಯೋಜನೆಯ ಸೌಲಭ್ಯ ಪಡೆಯುವಲ್ಲಿ ಇರುವ ಸಣ್ಣ-ಪುಟ್ಟ ತೊಡಕುಗಳನ್ನು ಸರಿಪಡಿಸಲು ಅಗತ್ಯ ಕ್ರಮವಹಿಸಬೇಕು ಎಂದು ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ತಾಲೂಕ ಸಮಿತಿ ಅಧ್ಯಕ್ಷ ಬ್ರಿಜೇಶ ಪಾಟೀಲ್. ಅವರು ಅನುಷ್ಠಾನ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು. ಪಟ್ಟಣದ ತಾಲೂಕ ಪಂಚಾಯತಿ ಸಭಾಂಗಣದಲ್ಲಿ ಪಂಚ ಗ್ಯಾರಂಟಿ ಯೋಜನೆಗಳ ತಾಲೂಕು ಮಟ್ಟದ ಪ್ರಗತಿ ಪರಿಶೀಲನ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಗ್ಯಾರಂಟಿ ಯೋಜನೆಗಳು ಸಮರ್ಪಕವಾಗಿ ಜನರಿಗೆ ತಲುಪುತ್ತಿದ್ದು, ಲೋಪಗಳು ಇದ್ದರೆ ಸರಿಪಡಿಸಿ ಯೋಜನೆಯ ಪ್ರಯೋಜನ ಅರ್ಹ ಫಲಾನುಭವಿಗಳಿಗೆ ತಲುಪುವಂತೆ ನೋಡಿಕೊಳ್ಳಲಾಗಿದೆ ಎಂದರು.

ಅರ್ಹ ಫಲಾನುಭವಿಗಳಿಗೆ ಸರಕಾರದ ಮಹತ್ವಾಕಾಂಕ್ಷಿ ಪಂಚ ಗ್ಯಾರಂಟಿ ಯೋಜನೆಗಳ ಸೌಲಭ್ಯ ಕಲ್ಪಿಸುವ ಹಿನ್ನಲೆಯಲ್ಲಿ ಗೃಹ ಜ್ಯೋತಿ, ಗೃಹಲಕ್ಷ್ಮೀ, ಅನ್ನಭಾಗ್ಯ ಹಾಗೂ ಯುವ ನಿಧಿ ಯೋಜನೆಗಳಡಿ ನೋಂದಣಿಯಾದ ಫಲಾನುಭವಿಗಳನ್ನು ಗ್ಯಾರಂಟಿ ಅನುಷ್ಠಾನ ಇಲಾಖೆಯ ಅಧಿಕಾರಿಗಳಿಂದ ಮರು ಪರಿಶೀಲಿಸುವ ಕಾರ್ಯ ಕೊನೆಯ ಹಂತದಲ್ಲಿದೆ ಎಂದು ತಿಳಿಸಿದರು. ಸರ್ಕಾರದ ಯೋಜನೆಗಳ ಸಂಪೂರ್ಣ ಪ್ರಯೋಜನ ಅರ್ಹ ಫಲಾನುಭವಿಗಳಿಗೆ ತಲುಪುವಂತೆ ಅಧಿಕಾರಿಗಳು ಶೀಘ್ರ ಕ್ರಮ ಕೈಗೊಳ್ಳಬೇಕು, ಗೃಹಲಕ್ಷ್ಮೀ ಯೋಜನೆಯಲ್ಲಿ ಕೆಲವರಿಗೆ ತಿಂಗಳು ತಿಂಗಳು ಪಾವತಿಯಾಗುತ್ತಿಲ, ಅದನು ಸರಿ ಪಡಿಸಿ, ಗೃಹಜ್ಯೋತಿ ಯೂನಿಟ್ ಹೆಚ್ಚಳ ಮಾಡಬೇಕು, ಪಡಿತರ ಚೀಟಿಯಲ್ಲಿರುವ ಎಲ್ಲಾ ಫಲಾನುಭವಿಗಳ ಭಯೋಮೆಟ್ರೀಕ್ ಮಾಡಿಸುವ ಅವದಿ ವಿಸ್ತರಣೆ ಮಾಡಿ, ವಿದ್ಯಾರ್ಥಿಗಳು, ರೈತರಿಗೆ ಮಹಿಳೆಯರಿಗೆ ಸಮಯಕ್ಕೆ ಸರಿಯಾಗಿ ಬಸ್ ಓಡಿಸಲು ಕ್ರಮಕೈಗೊಳಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು. ಈ ಸಂದರ್ಭದಲ್ಲಿ ಸದಸ್ಯರಾದ. ಎಂ.ಶ್ರೀ ನಿವಾಸ,ರೇಣುಕಾ, ಭೀರಪ್ಪ, ಶಿವಪ್ಪಗೌಡ ಹಳ್ಳಿ, ಹೆಚ್ ಮಾರ್ಕಪ್ಪ, ಅಯ್ಯಪ್ಪ, ಹನುಮಂತ ( ಲಂಕೇಶ), ಆಂಜನೆಯ್ಯ ಯಾದವ್, ಬಾಗ್ಯಮ್ಮ, ಮಲ್ಲಿಕಾರ್ಜುನ, ಚಾಂದಪಾಷ ಕವಿತಾಳ, ತಾಲೂಕ ಪಂಚಾಯತಿ ಇಒ. ಮಂಜುನಾಥ ಜಾವೂರ, ಸಿಡಿಪಿಒ ವಿರುಪಾಕ್ಷಿ ಸ್ವಾಮಿ, ಜೇಸ್ಕಾಂ ಎಇಇ ಮಹ್ಮದ್ ಶಫಿ, ತಾ.ಪ ಪಂ.ರಾ. ಬಸವರಾಜ, ಬಸವರಾಜ ಕೆಎಸ್ ಆರ್ ಟಿಸಿ ಕಂಟ್ರೋಲರ್ ನಾಗರಾಜ ಎಂ,ರೂಪ ಅದೂರು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಎಫ್ ಡಿ ಎ ಇದ್ದರು.

## ಖರ್ಗೆ ಭಾಷಣದ ವೇದಿಕೆ ಶುದ್ಧೀಕರಣ ಖಂಡಿಸಿ ಕಾಂಗ್ರೆಸ್ ಪ್ರತಿಭಟನೆ



ಕಲಬುರಗಿ,ಆ.17-

ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಉತ್ತರಾಖಂಡದ ಹಲ್ದ್ವಾನಿಯಲ್ಲಿ ಬಹಿರಂಗ ಸಭೆಯಲ್ಲಿ ಮಾತನಾಡಿದ್ದ ವೇದಿಕೆಯನ್ನು ಶುದ್ಧೀಕರಣ ಮಾಡಿರುವ ಘಟನೆಯನ್ನು ಖಂಡಿಸಿ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ನಗರದಲ್ಲಿ ಭಾನುವಾರ ಪ್ರತಿಭಟನೆ ನಡೆಯಿತು.

ನಗರದ ಸೇಡಂ ರಸ್ತೆಯಲ್ಲಿರುವ ಜಿಲ್ಲಾ ಕಾಂಗ್ರೆಸ್ ಕಚೇರಿಯಿಂದ ಆರಂಭವಾದ ಪ್ರತಿಭಟನಾ ಮೆರವಣಿಗೆ ಅನ್ನಪೂರ್ಣ ಕ್ರಾಸ್‌ವರೆಗೆ ಸಾಗಿತು. ಈ ವೇಳೆ ಬಿಜೆಪಿ, ಆರ್‌ಎಸ್‌ಎಸ್ ಹಾಗೂ ಕೋಮುವಾದಿ ಮನಸ್ಥಿತಿಗಳ ವಿರುದ್ಧ ಕಾರ್ಯಕರ್ತರು ಧಿಕ್ಕಾರದ ಘೋಷಣೆಗಳನ್ನು ಕೂಗಿದರು. ಪ್ರತಿಭಟನಾಕಾರರು ಟೈರ್‌ಗಳನ್ನು ಸುಟ್ಟು ಆಕ್ರೋಶ ವ್ಯಕ್ತಪಡಿಸಿದರು.

ಸ್ವಾತಂತ್ರ್ಯ ಸಿಕ್ಕು 80 ವರ್ಷವಾದರೂ ಜಾತೀಯತೆ ಹೋಗಲಿಲ್ಲವೇ?, ಸಂವಿಧಾನವೇ ನಮ್ಮ ಧರ್ಮ, ಸಮಾನತೆಯೇ ಅದರ ಗುರಿ, ಜಾತಿಯಿಂದ ಶುದ್ಧಿಯಲ್ಲ, ಮನಸ್ಸಿನಿಂದ ಶುದ್ಧಿ ಬೇಕು, ಮಣ್ಣು ಶುದ್ಧ ಮಾಡುವೀರಾ? ಮನಸ್ಸು ಶುದ್ಧಿ ಮೊದಲು ಮಾಡಿ, ಏಕತೆಗೆ ಜೈ, ದ್ವೇಷಕ್ಕೆ ಧಿಕ್ಕಾರ, ಜೈಭೀಮ್, ಜೈ ಸಂವಿಧಾನ ಸೇರಿದಂತೆ ವಿವಿಧ ಘೋಷಣೆಗಳನ್ನು ಒಳಗೊಂಡ ಭಿತ್ತಿಫಲಕಗಳನ್ನು ಪ್ರತಿಭಟನಾಕಾರರು ಪ್ರದರ್ಶಿಸಿದರು.

ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯ ಜಗದೇವ ಗುತ್ತೇದಾರ ಮಾತನಾಡಿ, ಮಲ್ಲಿಕಾರ್ಜುನ ಖರ್ಗೆ ಅವರು ಭಾಷಣ ಮಾಡಿದ ಸ್ಥಳವನ್ನು ಶುದ್ಧೀಕರಿಸಿರುವುದು ಅತ್ಯಂತ ಖಂಡನೀಯ. ಇಂತಹ ಕೃತ್ಯಗಳು ಜಾತೀಯತೆ ಹಾಗೂ ಅಸ್ಪೃಶ್ಯತೆಯ ಮನೋಭಾವ ಇನ್ನೂ ಜೀವಂತವಾಗಿರುವುದನ್ನು ತೋರಿಸುತ್ತವೆ ಎಂದರು.

''ಈ ಕೃತ್ಯ ಎಸಗಿದವರ ಹಿಂದೆ ಯಾರಿದ್ದಾರೆ ಎಂಬುದು ತನಿಖೆಯಿಂದ ಬಹಿರಂಗವಾಗಬೇಕು. ಘಟನೆ ನಡೆದು ಹಲವು ದಿನಗಳಾದರೂ ಕಿಡಿಗೇಡಿಗಳನ್ನು ವಶಕ್ಕೆ ಪಡೆಯದಿರುವುದು ಅಕ್ಷಮ್ಯ. ಸರ್ಕಾರ ಕೂಡಲೇ ತಪ್ಪಿತಸ್ಥರನ್ನು ಬಂಧಿಸಿ ಕಾನೂನುಬದ್ಧವಾಗಿ ಕಠಿಣ ಶಿಕ್ಷೆಗೆ ಒಳಪಡಿಸಬೇಕು'' ಎಂದು ಆಗ್ರಹಿಸಿದರು.

ಶಾಸಕ ಅಲ್ಲಮಪ್ರಭು ಪಾಟೀಲ ಹಾಗೂ ವಿಧಾನ ಪರಿಷತ್ ಸದಸ್ಯ ತಿಪ್ಪಣ್ಣಪ್ಪ ಕಮಕನೂರ ಮಾತನಾಡಿ, ಸಂವಿಧಾನ ಪ್ರತಿಪಾದಿಸುವ ಸಮಾನತೆ, ಸಹೋದರತ್ವ ಹಾಗೂ ಸಾಮಾಜಿಕ ನ್ಯಾಯದ ಆಶಯಗಳಿಗೆ ವಿರುದ್ಧವಾದ ಇಂತಹ ಕೃತ್ಯಗಳನ್ನು ಯಾವುದೇ ಕಾರಣಕ್ಕೂ ಸಹಿಸಲು ಸಾಧ್ಯವಿಲ್ಲ ಎಂದು ಹೇಳಿದರು. ಪ್ರತಿಭಟನೆಯಲ್ಲಿ ಕಲಬುರಗಿ ಉತ್ತರ ಕ್ಷೇತ್ರದ ಶಾಸಕ ಕನೀಜ್ ಫಾತಿಮಾ, ಸುಭಾಷ ರಾಠೋಡ, ಕುಡಾ ಅಧ್ಯಕ್ಷ ಮಜಹರ್ ಆಲಂಖಾನ್, ಕೆಕೆಆರ್ ಟಿಸಿ ಅಧ್ಯಕ್ಷ ಅರುಣಕುಮಾರ್ ಪಾಟೀಲ್, ಮಾಜಿ ಸಚಿವ ರೇವೂನಾಯಕ ಬೆಳಮಗಿ, ಪಂಚ ಗ್ಯಾರಂಟಿ ಸಮಿತಿ ಜಿಲ್ಲಾಧ್ಯಕ್ಷೆ ಚಂದ್ರಿಕಾ ಪರಮೇಶ್ವರ, ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷೆ ರೇಣುಕಾ ಸಿಂಗೆ, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಶಕೀಲ್ ಅಹ್ಮದ್ ಸರಡಗಿ, ಮುಖಂಡರಾದ ಡಾ. ಕಿರಣ ದೇಶಮುಖ, ವಹಾಜ್ ಬಾಬಾ, ಲಚ್ಚಪ್ಪ ಜಮಾದಾರ್, ಭೀಮರಾವ ಟಿ.ಟಿ., ಈರಣ್ಣ ಝಳಕಿ, ಶಿವು ಹೊನಗುಂಟಿ, ಶಿವಾನಂದ ಮರ್ತೂರು, ಶ್ವೇತಾ ಗಾಜರೆ, ಲತಾ ರಾಠೋಡ, ಸೇರಿದಂತೆ ನೂರಾರು ಕಾಂಗ್ರೆಸ್ ಕಾರ್ಯಕರ್ತರು ಪಾಲ್ಗೊಂಡಿದ್ದರು.

## ಮೌಲಾನಾ ಆಝಾದ್ ಮಾದರಿ ಶಾಲೆ ಕಟ್ಟಡ ನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆ



ಬಳ್ಳಾರಿ/ಕಂಪ್ಲಿ,ಆ.17-

ಮುಸ್ಲಿಂ ಸಮಾಜದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುವ ಉದ್ದೇಶದಿಂದ ಕಂಪ್ಲಿ ಸೇರಿದಂತೆ ಕ್ಷೇತ್ರದಲ್ಲಿ ಸುಮಾರು 60 ಕೋಟಿ ರೂ. ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದು, ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದು ಶಾಸಕ ಜೆ.ಎನ್. ಗಣೇಶ್ ಹೇಳಿದರು.

ತಾಲೂಕಿನ ನಂ.10 ಮುದ್ದಾಪುರ ಗ್ರಾಮದ ಗ್ರಾಪಂ ಆವರಣದಲ್ಲಿ 202526ನೇ ಸಾಲಿನ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಯೋಜನೆಯಡಿ 4.27 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ ಮೌಲಾನಾ ಆಜಾದ್ ಮಾದರಿ ಶಾಲೆ ಕಟ್ಟಡದ ಕಾಮಗಾರಿಗೆ ಭಾನುವಾರ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

ಕಂಪ್ಲಿಕುರುಗೋಡು ವ್ಯಾಪ್ತಿಯಲ್ಲಿ ಈಗಾಗಲೇ ಸುಮಾರು 14 ಕೋಟಿ ರೂ. ವೆಚ್ಚದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ನಿರ್ಮಿಸಲಾಗಿದೆ. ಇದೀಗ 4.27 ಕೋಟಿ ರೂ. ವೆಚ್ಚದಲ್ಲಿ ಮೌಲಾನಾ ಆಜಾದ್ ಮಾದರಿ ಶಾಲೆ ನಿರ್ಮಾಣಕ್ಕೆ ಚಾಲನೆ ನೀಡಲಾಗಿದ್ದು, ನಿಗದಿತ ಅವಧಿಯೊಳಗೆ ಕಾಮಗಾರಿ ಪೂರ್ಣಗೊಳಿಸಿ ಮಕ್ಕಳ ಶಿಕ್ಷಣಕ್ಕೆ ಅನುಕೂಲ ಕಲ್ಪಿಸಲಾಗುವುದು ಎಂದರು.

ಕ್ಷೇತ್ರದಲ್ಲಿ ಶಾದಿಮಹಾಲ್, ಖಬರಸ್ತಾನ್ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಹೆಚ್.ವೀರಾಪುರದಲ್ಲಿ 10 ಎಕರೆ ಪ್ರದೇಶದಲ್ಲಿ ಸುಮಾರು 2530 ಕೋಟಿ ರೂ. ವೆಚ್ಚದಲ್ಲಿ ಸಂತ ಶಿಶುನಾಳ ಶರೀಫ್ ಶಾಲೆ ನಿರ್ಮಿಸಲು ಉದ್ದೇಶಿಸಲಾಗಿದೆ. ಶಿಕ್ಷಣದಿಂದ ವಂಚಿತರಾಗಿರುವ ಮುಸ್ಲಿಂ ಸಮುದಾಯದ ಮಕ್ಕಳ ಶೈಕ್ಷಣಿಕ ಮಟ್ಟ ಸುಧಾರಣೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದ್ದು, ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸಲಾಗುವುದು ಎಂದು ಹೇಳಿದರು. ನಂತರ ಮಿನಿ ವಿಧಾನಸೌಧದ ಬಳಿಯಲ್ಲಿ ಕೆಕೆಆರ್‌ಡಿಬಿ ಮ್ಯಾಕ್ರೋ ಯೋಜನೆಯಡಿ ಸುಮಾರು 3 ಕೋಟಿ ರೂ. ವೆಚ್ಚದಲ್ಲಿ ಕಾಂಪೌಂಡ್ ಗೋಡೆ, ಸಿಸಿ ರಸ್ತೆ ಹಾಗೂ ಚರಂಡಿ ಕಾಮಗಾರಿಗಳಿಗೆ ಅಡಿಗಲ್ಲು ನೆರವೇರಿಸಿದರು.

ಈ ಸಂದರ್ಭದಲ್ಲಿ ಮುಸ್ಲಿಂ ಧರ್ಮಗುರುಗಳಾದ ಸೈಯದ್ ಷಾ ಅಬುಲ್ ಹಸನ್ ಖಾದ್ರಿ, ಡಾ. ನೂರ್ ಸಾಹೇಬ್ ಸೈಯದ್ ಉಮೇಸ್ ಖಾದ್ರಿ, ಸೈಯದ್ ಷಾ ಆಶ್ವ ಖಾದ್ರಿ, ಎಪಿಎಂಸಿ ಅಧ್ಯಕ್ಷ ಹಬೀಬ್ ರಹೆಮಾನ್, ತಾಲೂಕು ಗ್ಯಾರಂಟಿ ಯೋಜನಾ ಸಮಿತಿ ಅಧ್ಯಕ್ಷ ಕೆ. ಶ್ರೀನಿವಾಸರಾವ್, ಪ್ರಧಾನ ಕಾರ್ಯದರ್ಶಿ ರಘುನಾಯಕ ಸೇರಿದಂತೆ ವಿವಿಧ ಮುಖಂಡರು, ಅಧಿಕಾರಿಗಳು ಹಾಗೂ ಸ್ಥಳೀಯರು ಉಪಸ್ಥಿತರಿದ್ದರು.

## ಬಳ್ಳಾರಿ ತಾಲೂಕಿನ 25 ಗ್ರಾಮ ಪಂಚಾಯತಿಗಳಲ್ಲಿ 'ಜಾಬ್ ಕಾರ್ಡ್ ಮೇಳ'ಕ್ಕೆ ಚಾಲನೆ: ಇಒ ಶ್ರೀಧರ್ ಬಾರಕೇರ್

ಬಳ್ಳಾರಿ,ಆ.17-

ಗ್ರಾಮೀಣ ಭಾಗದ ಜನರಿಗೆ ನಿರಂತರ ಉದ್ಯೋಗ ಒದಗಿಸಿ ಆರ್ಥಿಕ ಭದ್ರತೆ ಕಲ್ಪಿಸುವ ಉದ್ದೇಶದಿಂದ 'ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜಗಾರ್ ಅಂಡ್ ಅಜೀವಿಕ ಮಿಷನ್ ಗ್ರಾಮೀಣ' (ವಿಬಿಜಿ ರಾಮ್ ಜಿ) ಯೋಜನೆಯಡಿ ಬಳ್ಳಾರಿ ತಾಲೂಕಿನ ಎಲ್ಲಾ 25 ಗ್ರಾಮ ಪಂಚಾಯತಿಗಳಲ್ಲಿ ಆಗಸ್ಟ್ 15 ರಿಂದ ಸೆಪ್ಟೆಂಬರ್ 15 ರವರೆಗೆ ಒಂದು ತಿಂಗಳ ಕಾಲ 'ಜಾಬ್ ಕಾರ್ಡ್ ಮೇಳ' ಹಮ್ಮಿಕೊಳ್ಳಲಾಗಿದೆ ಎಂದು ಬಳ್ಳಾರಿ ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಶ್ರೀಧರ್ ಬಾರಕೇರ್ ಅವರು ತಿಳಿಸಿದರು. 80ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ತಾಲೂಕು ಪಂಚಾಯತಿಯಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗ್ರಾಮೀಣ ಭಾಗದ ಅರ್ಹ ಕೂಲಿಕಾರರಿಗೆ ಅಕುಶಲ ಕೆಲಸ ನೀಡುವುದು ಈ ಅಭಿಯಾನದ ಪ್ರಮುಖ ಗುರಿಯಾಗಿದೆ ಎಂದರು.



ಗ್ರಾಮೀಣ ಭಾಗದ ಜನರ ಸಕ್ರಿಯ ಭಾಗವಹಿಸುವಿಕೆ ಹೆಚ್ಚಿಸುವುದು, ಉದ್ಯೋಗ ಸೃಜನೆಯ ಮೂಲಕ ಜೀವನೋಪಾಯದ ಭದ್ರತೆ ಕಲ್ಪಿಸುವುದು, ಬರ ನಿರ್ವಹಣೆ ಹಾಗೂ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿಪಡಿಸುವುದು, ಗ್ರಾಮೀಣ ಜನತೆ ಉದ್ಯೋಗಕ್ಕಾಗಿ ನಗರಗಳಿಗೆ ವಲಸೆ ಹೋಗುವುದನ್ನು ತಡೆಗಟ್ಟುವುದು ಅಭಿಯಾನದ ಉದ್ದೇಶವಾಗಿದೆ ಎಂದರು. ಮನೆ ಮನೆ ಭೇಟಿ ನೀಡಿ ಉದ್ಯೋಗದ ಬೇಡಿಕೆ ಸ್ವೀಕಾರ, ಸ್ಥಳದಲ್ಲೇ ದಾಖಲೆಗಳ ಪರಿಶೀಲನೆ ನಡೆಸಿ ಜಾಬ್ ಕಾರ್ಡ್ ವಿತರಣೆ, ಕೆಲಸದ ಬೇಡಿಕೆ ಸ್ವೀಕೃತಿ ಪತ್ರ ವಿತರಣೆ, ಅರ್ಹ ಫಲಾನುಭವಿಗಳಿಗೆ ವೈಯಕ್ತಿಕ ಕಾಮಗಾರಿಗಳ ಪಟ್ಟಿ ತಯಾರಿ ಮೇಳದಲ್ಲಿ ಸಿಗುವ ಸೇವೆಗಳಾಗಿದ್ದು, ಗ್ರಾಮೀಣ ಭಾಗದ ಜನರು/ಕೂಲಿಕಾರರು ಈ ಒಂದು ತಿಂಗಳ ಅಭಿಯಾನದ ಸದುಪಯೋಗ ಪಡೆದುಕೊಂಡು ತಮ್ಮ ಗ್ರಾಮ ಪಂಚಾಯತಿಗಳಲ್ಲಿ ಜಾಬ್ ಕಾರ್ಡ್ ಪಡೆದು ಉದ್ಯೋಗ ಖಾತರಿಪಡಿಸಿಕೊಳ್ಳಬೇಕು ಎಂದು ಅವರು ಕರೆ ನೀಡಿದರು.

ಈ ಸಂದರ್ಭದಲ್ಲಿ ಸಹಾಯಕ ನಿರ್ದೇಶಕರಾದ (ಗ್ರಾ.ಉ) ಆರ್.ಕೆ. ಬಸವರಾಜ್, ಸಂಧ್ಯಾರಾಣಿ (ಪಂ.ರಾಜ್), ಲೆಕ್ಕ ಸಹಾಯಕ ಲಕ್ಷ್ಮಣ್, ತಾಂತ್ರಿಕ ಸಂಯೋಜಕ ವಿಜಯಮಹಾಂತೇಶ, ತಾಲೂಕು ಐಇಸಿ ಸಂಯೋಜಕ ರಮೇಶ್ ಹಾಗೂ ತಾಲೂಕು ಪಂಚಾಯತಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.



## ನೃತ್ಯ ಭಾರತೀಯ ಸಂಸ್ಕೃತಿ ಪರಿಚಯಿಸುವ ಮಹತ್ವದ ಕಲಾಮಾಧ್ಯಮ: ಡಾ. ಶಶಿಧರ ನರೇಂದ್ರ

ಕಲಬುರಗಿ,ಆ.17-

ನೃತ್ಯ ಕೇವಲ ಮನರಂಜನೆಯ ಕಲೆಯಲ್ಲ; ಭಾರತೀಯ ಸಂಸ್ಕೃತಿ ಹಾಗೂ ಪರಂಪರೆಯನ್ನು ಮಕ್ಕಳಿಗೆ ಪರಿಚಯಿಸುವ ಮಹತ್ವದ ಕಲಾಮಾಧ್ಯಮವಾಗಿದೆ ಎಂದು ಸಂಸ್ಕಾರ ಭಾರತಿ ಕರ್ನಾಟಕ ಉತ್ತರ ಪ್ರಾಂತದ ಪ್ರಧಾನ ಕಾರ್ಯದರ್ಶಿ ಡಾ. ಶಶಿಧರ ನರೇಂದ್ರ ಹೇಳಿದರು.

ನಗರದ ಮರಾಠಿ ಸಾಹಿತ್ಯ ಮಂಡಳದ ಆವರಣದಲ್ಲಿ ಸಂಸ್ಕಾರ ಭಾರತಿ ಕಲಬುರಗಿ ಹಾಗೂ ನೂಪುರ ಸಂಸ್ಕೃತಿ ನೃತ್ಯ ಮತ್ತು ಸಂಗೀತ ಸಂಸ್ಥೆ ಸಹಯೋಗದಲ್ಲಿ ಆಯೋಜಿಸಿದ್ದ ಗುರು ವಂದನಾ, ನಟರಾಜ ಪೂಜನ ಹಾಗೂ ಗೆಜ್ಜೆಪೂಜೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನೃತ್ಯಾಭ್ಯಾಸದಿಂದ ಮಕ್ಕಳಲ್ಲಿ ಶಿಸ್ತು, ಏಕಾಗ್ರತೆ, ಸಮಯಪ್ರಜ್ಞೆ, ಗುರು-ಹಿರಿಯರ ಗೌರವ ಹಾಗೂ ಉತ್ತಮ ಸಂಸ್ಕಾರಗಳನ್ನು ಬೆಳೆಸಲು ಸಾಧ್ಯ. ನೃತ್ಯ ಕಲಿಯುವ ಮಕ್ಕಳು ಭಾರತೀಯ ಸಂಸ್ಕೃತಿ, ಪರಂಪರೆ ಹಾಗೂ ಜೀವನಮೌಲ್ಯಗಳನ್ನು ಅರಿತುಕೊಳ್ಳುವುದರ ಜೊತೆಗೆ ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳುತ್ತಾರೆ ಎಂದರು.

ಕಾರ್ಯಕ್ರಮದಲ್ಲಿ ಹಿರಿಯ ಸಂಗೀತ ಕಲಾವಿದೆ ಹಾಗೂ ಶಾರದಾ ಸಂಗೀತ ಕೇಂದ್ರದ ಅಧ್ಯಕ್ಷೆ, ಸಂಗೀತ ಶಿಕ್ಷಕಿ ಸುನಂದಾ ಸಾಲವಾಡಗಿ ಮತ್ತು ತಬಲಾ ವಾದಕ ರಾಘವೇಂದ್ರ ಕುಲಕರ್ಣಿ ಅವರ ಶಿಷ್ಯರಿಂದ ಸಂಗೀತ ಕಾರ್ಯಕ್ರಮ ನಡೆಯಿತು. ಈ ಸಂದರ್ಭದಲ್ಲಿ ಪ್ರಾಧ್ಯಾಪಕಿ ಸುನಂದಾ ಕುಲಕರ್ಣಿ ಹಾಗೂ ಸಂಗೀತ ಶಿಕ್ಷಕಿ ಸುನಂದಾ ಸಾಲವಾಡಗಿ ಅವರನ್ನು ಗುರು ವಂದನಾ ನಿಮಿತ್ತ ಸನ್ಮಾನಿಸಲಾಯಿತು.

ನೂಪುರ ಸಂಸ್ಕೃತಿ ನೃತ್ಯ ಮತ್ತು ಸಂಗೀತ ಸಂಸ್ಥೆಯ ಅಧ್ಯಕ್ಷೆ ವಿದುಷಿ ಸೌಖ್ಯಾ ಕುಲಕರ್ಣಿ ಹಾಗೂ ಪ್ರವೀಣ ಕುಲಕರ್ಣಿ ಅವರು ಗಣ್ಯರನ್ನು ಸನ್ಮಾನಿಸಿದರು. ನೃತ್ಯ ವಿದ್ಯಾರ್ಥಿಗಳ ಗೆಜ್ಜೆಪೂಜೆ, ನೃತ್ಯ ಪ್ರದರ್ಶನ, ಗುರುಗಳಿಗೆ ಗೌರವ ಸನ್ಮಾನ ಹಾಗೂ ಸಂಗೀತ ಕಾರ್ಯಕ್ರಮಗಳು ಸಮಾರಂಭದ ಪ್ರಮುಖ ಆಕರ್ಷಣೆಯಾಗಿದ್ದವು.

ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಸರ್ವೋತ್ತಮ ಸತಾಳಕರ, ಪತ್ರಕರ್ತ ನಾರಾಯಣ ಜೋಶಿ, ದತ್ತಾತ್ರೇಯ ಸಬನವೀಸ್, ಸುನಂದಾ ಸಬನವೀಸ್, ವರಲಕ್ಷ್ಮಿ ಕುಲಕರ್ಣಿ, ಪಿಡ್ಡಪ್ಪಾ ಜಾಲಗಾರ, ಪ್ರವೀಣ ಕುಲಕರ್ಣಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಬಡವರ ಗುಡಿಸಲು ತೆರವು ವಿರೋಧಿಸಿ ಮಾಜಿ ಶಾಸಕ ಸೋಮಲಿಂಗಪ್ಪ ಆಕ್ರೋಶ



ಸಿರುಗುಪ್ಪ,ಆ.17-

ಬಡ ಕುಟುಂಬಗಳ ಗುಡಿಸಲುಗಳನ್ನು ತೆರವುಗೊಳಿಸಿ ಅದೇ ಜಾಗದಲ್ಲಿ ಪಟ್ಟಣ ಪಂಚಾಯಿತಿಯ ನೂತನ ಕಾರ್ಯಾಲಯ ಕಟ್ಟಡ ನಿರ್ಮಿಸಲು ಮುಂದಾಗಿರುವ ಕ್ರಮಕ್ಕೆ ಮಾಜಿ ಶಾಸಕ ಎಂ.ಎಸ್. ಸೋಮಲಿಂಗಪ್ಪ ತೀವ್ರ ವಿರೋಧ ವ್ಯಕ್ತಪಡಿಸಿದರು. ಈ ವಿಚಾರವಾಗಿ ಹಾಲಿ ಶಾಸಕ ಬಿ.ಎಂ. ನಾಗರಾಜ ಅವರನ್ನು ತರಾಟೆಗೆ ತೆಗೆದುಕೊಂಡ ಘಟನೆ ತೆಕ್ಕಲಕೋಟೆಯಲ್ಲಿ ನಡೆಯಿತು.

ತಾಲೂಕಿನ ತೆಕ್ಕಲಕೋಟೆ ಪಟ್ಟಣದ 2ನೇ ವಾರ್ಡ್‌ನ ನಿಟ್ಟೂರು ರಸ್ತೆಯಲ್ಲಿರುವ ಪೌರಕಾರ್ಮಿಕರ ವಸತಿಗೃಹದ ಜಾಗದಲ್ಲಿ ಅನಧಿಕೃತ ಗುಡಿಸಲುಗಳ ತೆರವು ಕಾರ್ಯಾಚರಣೆ ನಡೆಯುತ್ತಿದ್ದ ಸ್ಥಳಕ್ಕೆ ಶಾಸಕ ಬಿ.ಎಂ. ನಾಗರಾಜ ಭೇಟಿ ನೀಡಿದರು.

ಈ ವೇಳೆ ಸ್ಥಳಕ್ಕೆ ಆಗಮಿಸಿದ ಮಾಜಿ ಶಾಸಕ ಸೋಮಲಿಂಗಪ್ಪ, ''ಬಡವರನ್ನು ಒಕ್ಕಲೆಬ್ಬಿಸಿ ಪಟ್ಟಣ ಪಂಚಾಯಿತಿ ಕಾರ್ಯಾಲಯ ನಿರ್ಮಿಸುವ ಅಗತ್ಯವೇನು? ಯಾರನ್ನು ಮೆಚ್ಚಿಸಲು ಈ ಕಾರ್ಯ ಮಾಡುತ್ತಿದ್ದೀರಿ?'' ಎಂದು ಪ್ರಶ್ನಿಸಿ ಅಸಮಾಧಾನ ವ್ಯಕ್ತಪಡಿಸಿದರು.

ಎರಡು ಎಕರೆ ಜಾಗದಲ್ಲಿ ಈಗಾಗಲೇ ಪೊಲೀಸ್ ವಸತಿಗೃಹ, ನೀರಾವರಿ ಇಲಾಖೆಯ ವಸತಿಗೃಹ, ಪಶು ಆಸ್ಪತ್ರೆ ಹಾಗೂ ಇಂದಿರಾ ಕ್ಯಾಂಟೀನ್‌ಗೆ ಬಹುತೇಕ ಜಾಗ ಬಳಕೆಯಾಗಿದೆ. ಪೌರಕಾರ್ಮಿಕರ ವಸತಿಗೃಹಕ್ಕೆ ಮೀಸಲಿಟ್ಟ ಜಾಗದಲ್ಲಿ ಪಟ್ಟಣ ಪಂಚಾಯಿತಿ ಕಾರ್ಯಾಲಯ ನಿರ್ಮಿಸುವುದು ಅವೈಜ್ಞಾನಿಕ. ರಾಷ್ಟ್ರೀಯ ಹೆದ್ದಾರಿ ಸಮೀಪ ಕೆಇಬಿ ಹಿಂಭಾಗದಲ್ಲಿರುವ ಜಾಗದಲ್ಲಿ ಕಚೇರಿ ನಿರ್ಮಿಸಬೇಕು ಎಂದು ಸೋಮಲಿಂಗಪ್ಪ ಆಗ್ರಹಿಸಿದರು.

ಪರಿಹಾರ, ನಿವೇಶನದ ಭರವಸೆ :

ಸ್ಥಳದಲ್ಲಿ ಧರಣಿ ನಡೆಸುತ್ತಿದ್ದ ಕುಟುಂಬಗಳನ್ನು ಶಾಸಕ ಬಿ.ಎಂ. ನಾಗರಾಜ ಭೇಟಿ ಮಾಡಿ, ಸರ್ಕಾರದ ವತಿಯಿಂದ ಪರಿಹಾರ ಹಾಗೂ ನಿವೇಶನ ಕಲ್ಪಿಸಲು ಪ್ರಯತ್ನಿಸಲಾಗುವುದು ಎಂದು ಭರವಸೆ ನೀಡಿದರು.

''ಪರಿಹಾರ ದೊರೆಯುವವರೆಗೆ ಜಾಗ ಖಾಲಿ ಮಾಡುವುದಿಲ್ಲ. ಪರಿಹಾರ ಸಿಗುವವರೆಗೆ ಧರಣಿ ಮುಂದುವರಿಸುತ್ತೇವೆ'' ಎಂದು ಧರಣಿ ನಿರತ ಮಲ್ಲಮ್ಮ ಹೇಳಿದರು.

ಸ್ಥಳದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಸಿಪಿಐಗಳಾದ ಚಂದನ್ ಗೋಪಾಲ, ಹನುಮಂತಪ್ಪ, ಪಿಎಸ್‌ಐಗಳಾದ ಸದ್ದಾಂ ಹುಸೇನ್, ಪರಶುರಾಮ, ಶಶಿಧರ ನಾಯಕ ಸೇರಿದಂತೆ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಬಂದೋಬಸ್ತ್ ಕೈಗೊಂಡಿದ್ದರು.

ಕಾಂಗ್ರೆಸ್ ಮುಖಂಡರಾದ ಮಲ್ಲಿಕಾರ್ಜುನ ಬಲಪ್ಪ, ನಾಗಪ್ಪ, ನರೇಂದ್ರಸಿಂಹ, ಶ್ಯಾಮಸುಂದರ, ಖಾದರ್‌ಭಾಷ ಹಾಗೂ ಬಿಜೆಪಿ ತಾಲೂಕು ಅಧ್ಯಕ್ಷ ಕುಂಟ್ನಾಳ್ ಮಲ್ಲಿಕಾರ್ಜುನಸ್ವಾಮಿ, ಮಂಜುನಾಥ, ರಾಘವೇಂದ್ರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ನಿಮ್ಮೂರು ಸುದ್ದಿ

## ಸಂಪಾದಕೀಯ



# ಬದಲಾದ ಗಾಳಿಯ ದಿಕ್ಕು ಕಂಡು ಕಂಗಾಲಾಗಿದ್ದಾರೆ ಪ್ರಧಾನಿ ಮೋದಿ

ಕೇಡುಗಾಲದ ತುತ್ತ ತುದಿಯ ಅವಸ್ಥೆ ಕುರಿತು ಜಾರ್ಜ್ ಆರ್ವೆಲ್ ರಚಿಸಿದ ಪ್ರಸಿದ್ಧ ಕೃತಿಯ ಹೆಸರು 1984. ಕಾಲ್ಪನಿಕ ಕೇಡುಗಾಲ ಕುರಿತ ಈ ಕಾದಂಬರಿಯಲ್ಲಿ ಎಂಬ ಮಾತೊಂದನ್ನು ಆರ್ವೆಲ್ ಟಂಕಿಸಿದ್ದಾನೆ. ಸರ್ವಾಧಿಕಾರೀ ಆಳುವ ಪಕ್ಷವನ್ನು ಅಥವಾ ಅದರ ನಾಯಕ ಬಿಗ್ ಬ್ರದರ್ ನನ್ನು ವಿರೋಧಿಸುವ ಆಲೋಚನೆಗಳನ್ನು ಹೊಂದಿರುವ ಪ್ರಜೆಗಳನ್ನು ಬಣ್ಣಿಸುವ ಪದವಿದು

ದೇಶದಲ್ಲಿ ಬೀಸುತ್ತಿದ್ದ ಗಾಳಿ ತಿಂಗಳೊಪ್ಪತ್ತಿನಿಂದ ದಿಕ್ಕು ಬದಲಿಸಿದೆ. ಕವಿದಿದ್ದ ಭಯಭೀತ ವಾತಾವರಣ ಮರೆಯಾಗಿದೆ. ಜನಸಮೂಹಗಳು ತಮ್ಮ ಮನಸಿನ ಮಾತುಗಳನ್ನು ನಿರ್ಭಿಡೆಯಿಂದ ಆಡುವ ಸ್ಥಿತಿ ಸೃಷ್ಟಿಯಾಗಿದೆ. ಸರ್ವಾಧಿಕಾರಕ್ಕೆ ಸೆಡ್ಡು ಹೊಡೆಯತೊಡಗಿದೆ ಜನತಂತ್ರ. ಕ್ರಾಂತಿಕಾರಿ ಬದಲಾವಣೆಯಿದು. ಫ್ಯಾಶಿಸ್ಟರು-ಏಕಚಕ್ರಾಧಿಪತಿಗಳು ನೀರು ಗೊಬ್ಬರ ಎರೆದು ಪೋಷಿಸಿದ್ದ ಭಯಭೀತಿಯ ವಿಷವೃಕ್ಷದ ಬುಡಕ್ಕೆ ಕೊಡಲಿ ಏಟು ಬಿದ್ದಿದೆ. ಈ ಪರಿವರ್ತನೆಯ ಹಿಂದಿರುವ ಏಕೈಕ ಶಕ್ತಿ ಭಾರತದ ಯುವಜನತೆ. ಮನಸ್ಥಿತಿಯನ್ನು ಮುಸ್ಲಿಮ್ ದ್ವೇಷದ ದಳ್ಳುರಿಗೆ ಒಪ್ಪಿಸಿದ್ದ ಒಂದು ತಲೆಮಾರಿನ ಗುಲಾಮಗಿರಿ ಸಂಕೋಲೆಗಳು ಸಡಿಲವಾಗಿವೆ. ಅವುಗಳನ್ನು ಕಿತ್ತೊಗೆಯುವುದೊಂದೇ ಬಾಕಿ.

ಈ ಹಠಾತ್ ಬದಲಾವಣೆ ನರೇಂದ್ರ ಮೋದಿ ಮತ್ತು ಅವರ ಅತ್ಯಾಪ್ತ ಗೃಹಸಚಿವ ಅಮಿತ್ ಶಾ ಅವರನ್ನು ಕಂಗೆಡಿಸಿದೆ. ಇನ್ನೂ ಹಲವು ಅವಧಿಗಳ ಕಾಲ ಅಧಿಕಾರ ಹಿಡಿಯುವ ಇವರ ಕನಸಿಗೆ ಕೊಳ್ಳಿ ಬಿದ್ದಿದೆ. ಮುಸ್ಲಿಮ್ ದ್ವೇಷದ ತೀರುವಳಿ ದಿನಾಂಕ ಸಮೀಪಿಸಿದೆ. ಕೋಟಿ ಕೋಟಿ ದೇಣಿಗೆ ಹಣವನ್ನು ಲೂಟಿ ಹೊಡೆಯುವ ಮೂಲಕ ರಾಮಮಂದಿರದ ಕಾರ್ಯಸೂಚಿಯನ್ನು ಬಿಜೆಪಿ-ಸಂಘಪರಿವಾರ ಕೈಯಾರೆ ಕೆಡವಿಕೊಂಡಿದೆ.

ಅಧಿಕಾರ ಎಂಬ ಹುಲಿಸವಾರಿ ಮಾಡತೊಡಗಿದೆ ಈ ಜೋಡಿ. ಇಳಿದರೆ ಹುಲಿಯ ಬಾಯಿಗೆ ಆಹಾರ ಆಗಬೇಕಾಗುತ್ತದೆ. ಏನಕೇನ ಪ್ರಕಾರೇಣ ಸವಾರಿ ಮಾಡುತ್ತಲೇ ಇರಬೇಕು. ಅದಕ್ಕಾಗಿ ಅದೆಷ್ಟು ಅಡ್ಡದಾರಿಗಳನ್ನು ಹಿಡಿದರೂ ಪರವಾಗಿಲ್ಲ. ಯಾರ ಮೇಲೆ ಏನೇನು ಹುಸಿ ಆಪಾದನೆ ಹೊರಿಸಿದರೂ ಸರಿ. ಅಡ್ಡ ಬಂದ ಎಲ್ಲರನ್ನೂ ಖಳನಾಯಕರಂತೆ ಬಿಂಬಿಸಿದರೂ ತಪ್ಪಿಲ್ಲ.

ಈ ಹಿಂದೆ ನಗರ ನಕ್ಸಲರು (ಅರ್ಬನ್ ನಕ್ಸಲ್) ಎಂದು ಸಾಮಾಜಿಕ ನ್ಯಾಯಪರ ಹೋರಾಟಗಾರರನ್ನು ಕರೆದಿದ್ದರು ಇದೇ ಮೋದಿ. ಅವರ ಕಂಪ್ಯೂಟರುಗಳಲ್ಲಿ ಸುಳ್ಳು ಸಾಕ್ಷ್ಯಗಳನ್ನು ನೆಟ್ಟು, ದೇಶದ್ರೋಹದ ಆಪಾದನೆ ಹೊರಿಸಿ ಅವರನ್ನು ಬಂಧಿಸಿ ದೀರ್ಘಕಾಲ ಜೈಲುಗಳಲ್ಲಿ ಕೊಳೆಯಿಸಿದರು. ಬುಡಕಟ್ಟು ಜನರ ಭೂಮಿ ಹಕ್ಕುಗಳಿಗಾಗಿ ಹೋರಾಡಿದ ಸ್ಟ್ಯಾನ್ ಸ್ವಾಮಿ ಎಂಬ ಕ್ರೈಸ್ತ ಧರ್ಮಗುರುವನ್ನು ಜೈಲಿಗೆ ತಳ್ಳಿ, ಅಲ್ಲಿಯೇ ಅವರನ್ನು ಹತ್ಯೆ ಮಾಡಲಾಯಿತು. ಅತ್ಯಾಚಾರಿಗಳಾದ ಆಸಾರಾಮ್ ಬಾಪು ಮತ್ತು ಡೇರಾ ಸಚ್ಚಾ ಸೌದಾದ ಗುರ್ಮೀತ್ ರಾಮ್ ರಹೀಮ್ ಅವರನ್ನು ಮತ್ತೆ ಮತ್ತೆ ಪೆರೋಲ್ ಮೇಲೆ ಬಿಡುಗಡೆ ಮಾಡಲಾಯಿತು. ಆಸಾರಾಮ್ ಆರೋಗ್ಯ ನೋಡಿಕೊಳ್ಳಲು 24 ತಾಸು ಕಾಲ ಶುಶ್ರೂಷಕರನ್ನು ನೀಡಲಾಯಿತು. ಕೈ ನಡುಗುವ ವೃದ್ಧ ಸ್ಟ್ಯಾನ್ ಸ್ವಾಮಿ ಅವರಿಗೆ ಲೋಟದಿಂದ ತುಳುಕಿಸದೆ ನೀರು ಕುಡಿಯಲು ಒಂದು ಸಿಪ್ಪರ್ ನ್ನು ಕೂಡ ನಿರಾಕರಿಸಲಾಯಿತು. ಗುಂಪುಗಳನ್ನು ಹತಾರುಗಳಂತೆ ಛೂಬಿಟ್ಟು ಅಲ್ಪಸಂಖ್ಯಾತರನ್ನು ಹಾದಿ ಬೀದಿಗಳಲ್ಲಿ ಜಜ್ಜಿ ಕೊಲ್ಲಲಾಯಿತು. ಕೋಮುವಾದವನ್ನು ವಿರೋಧಿಸುವ, ಬಡವರು ಕೃಷಿಕ ಕೂಲಿಕಾರರು ಕಾರ್ಮಿಕರ ಪರವಾಗಿ ಮಾತಾಡುವವರನ್ನು ಬೇಟೆಯಾಡಲಾಯಿತು. ಸಾಂವಿಧಾನಿಕ ಸಂಸ್ಥೆಗಳನ್ನು ಕೈವಶ ಮಾಡಿಕೊಳ್ಳಲಾಯಿತು. ವಿರೋಧ ಪಕ್ಷಗಳನ್ನು ಬಗ್ಗುಬಡಿದು ಒಡೆದು ಸಂಸದರನ್ನು ಆಳುವ ಪಕ್ಷಕ್ಕೆ ಸೇರಿಸಿಕೊಳ್ಳಲಾಯಿತು. ಇದೀಗ ಕ್ಷೇತ್ರಮರುವಿಂಗಡಣೆಗೆ ಸಂವಿಧಾನ ತಿದ್ದುಪಡಿಯ ಸನ್ನಾಹ ನಡೆದಿದೆ. ಕಳೆದ ಹನ್ನೆರಡು ವರ್ಷಗಳಲ್ಲಿ ಆದ ಅನ್ಯಾಯಗಳಿಗೆ ಲೆಕ್ಕವಿಲ್ಲ.

ಈ ಕಾಲಘಟ್ಟದಲ್ಲೇ ಯುವಜನತೆ ಇರುವೆ ಸೈನ್ಯದಂತೆ ನೆಲದಿಂದ ಎದ್ದು ಬಂದಿದ್ದಾರೆ. ಹೊಸ ಭವಿಷ್ಯದ ಭರವಸೆಯನ್ನು ಹುಟ್ಟಿಸಿದ್ದಾರೆ.

ಹತಾಶರಾಗಿರುವ ಪ್ರಧಾನಿಯವರು ಮುಳುಗುವವನು ಕೈಕಾಲು ಬಡಿಯುವಂತೆ ಕಡೆಯ ಪ್ರಯತ್ನ ನಡೆಸಿದ್ದಾರೆ. ಮೊನ್ನೆ ಆಗಸ್ಟ್ 15ರಂದು ಕೆಂಪುಕೋಟೆಯ ಮೇಲಿಂದ ಮಾಡಿದ ಭಾಷಣದಲ್ಲಿ ದಿಮಾಗಿ ನಕ್ಸಲ್ ಎಂದು ಸಾಮಾಜಿಕ ನ್ಯಾಯಪರ ಹೋರಾಟಗಾರರನ್ನು ಜರೆದಿದ್ದಾರೆ. ಅವರನ್ನು ಹುಡುಕಿ ಗುರುತಿಸಿ ಒಂಟಿಯಾಗಿಸಬೇಕೆಂದು ಕರೆ ನೀಡಿದ್ದಾರೆ. ಇದರ ಒಳಾರ್ಥ ಅವರ ವಿರುದ್ಧ ದ್ವೇಷದ ಬೇಟೆ ನಾಯಿಗಳನ್ನು ಛೂ ಬಿಡುವುದೇ ಆಗಿದೆ. ದಿಮಾಗಿ ನಕ್ಸಲರೆಂದರೆ ಬುದ್ಧಿವಂತ ನಕ್ಸಲರು ಎಂದು ಅರ್ಥ. ಸಾಮಾಜಿಕ ನ್ಯಾಯಕ್ಕೆ ಫ್ಯಾಸಿಸ್ಟ್ ಸರ್ಕಾರ ಇಟ್ಟಿರುವ ಹೆಸರುಗಳು ನಗರ ನಕ್ಸಲ್ ವಾದ ಮತ್ತು ದಿಮಾಗಿ ನಕ್ಸಲ್ ವಾದ ಎಂದು.

ಕೇಡುಗಾಲದ ತುತ್ತ ತುದಿಯ ಅವಸ್ಥೆ ಕುರಿತು ಜಾರ್ಜ್ ಆರ್ವೆಲ್ ರಚಿಸಿದ ಪ್ರಸಿದ್ಧ ಕೃತಿಯ ಹೆಸರು 1984. ಕಾಲ್ಪನಿಕ ಕೇಡುಗಾಲ ಕುರಿತ ಈ ಕಾದಂಬರಿಯಲ್ಲಿ ಎಂಬ ಮಾತೊಂದನ್ನು ಆರ್ವೆಲ್ ಟಂಕಿಸಿದ್ದಾನೆ. ಸರ್ವಾಧಿಕಾರೀ ಆಳುವ ಪಕ್ಷವನ್ನು ಅಥವಾ ಅದರ ನಾಯಕ ಬಿಗ್ ಬ್ರದರ್ ನನ್ನು ವಿರೋಧಿಸುವ ಆಲೋಚನೆಗಳನ್ನು ಹೊಂದಿರುವ ಪ್ರಜೆಗಳನ್ನು ಬಣ್ಣಿಸುವ ಪದವಿದು. ಓಶಿಯಾನಿಯಾ ಎಂಬ ದೇಶದ ಪೌರರು ಇವರು. ಇದನ್ನೇ ಅಥವಾ ಎಂದೂ ಕರೆಯಲಾಗುತ್ತದೆ. ಆಚರಣೆಯಲ್ಲಿ ಅಲ್ಲ, ಆಲೋಚನೆಯಲ್ಲಿ ಕೂಡ ಆಳುವ ಪಕ್ಷವನ್ನು ವಿರೋಧಿಸುವಂತಿಲ್ಲ. ಇಂತಹ ಆಲೋಚನೆಗಳು ಅಪರಾಧ ಎನಿಸಿಕೊಳ್ಳುತ್ತವೆ. ಆಳುವ ಪಕ್ಷ ಒಪ್ಪಿಗೆ ನೀಡದಿರುವ ವಿಧಾನದಲ್ಲಿ ಆಲೋಚಿಸುವುದು ಪಾತಕವಾಗಿರುತ್ತದೆ. ಒಳುವ ಪಕ್ಷಕ್ಕೆ ಒಪ್ಪಿತ ಅಲ್ಲದ ಬೌದ್ಧಿಕ ಕ್ರಿಯೆಗಳನ್ನು ಥಾಟ್ ಕ್ರೈಮ್ ಅಥವಾ ಆಲೋಚನಾ ಅಪರಾಧ ಎಂದು ಪರಿಗಣಿಸಲಾಗಿರುತ್ತದೆ. ಹೀಗಾಗಿ ಓಶಿಯಾನಾ ದೇಶದ ಆಳುವ ಪಕ್ಷ ತನ್ನ ಪ್ರಜೆಗಳ ನಡೆಗಳು, ನುಡಿಗಳನ್ನು ಮಾತ್ರವಲ್ಲದೆ ಆಲೋಚನೆಗಳನ್ನೂ ನಿಯಂತ್ರಿಸುತ್ತಿರುತ್ತದೆ.

ಆರ್ವೆಲ್ ನ ಕೃತಿ 1984 ರಲ್ಲಿ (ಥಿಂಕ್ ಪೋಲ್) ಎಂಬ ಮತ್ತೊಂದು ಹೊಸ ಪದದ ಕುರಿತು ಮಾತಾಡುತ್ತದೆ. ಥಿಂಕ್ ಪೋಲ್ ಎಂದರೆ ಆಲೋಚನೆಯನ್ನು ಪತ್ತೆ ಹಚ್ಚಿ ಅದನ್ನು ನಿರ್ಮೂಲನ ಮಾಡುವ ಪೊಲೀಸರು ಎಂದು ಅರ್ಥ. ಅರ್ಥಾತ್ . ದನಿ-ದೃಶ್ಯ ಬೇಹುಗಾರಿಕೆಯ ಮೂಲಕ ಆಲೋಚನಾ ಅಪರಾಧಿಗಳನ್ನು ಪತ್ತೆ ಹಚ್ಚಿ ಬಂಧಿಸಿ ಕೊಂದು ಹಾಕುತ್ತಾರೆ. ನಾಗರಿಕರ ಬೌದ್ಧಿಕ, ಮಾನಸಿಕ ಹಾಗೂ ನೈತಿಕ ಸ್ವಾತಂತ್ರ್ಯವು ಆಳುವ ಪಕ್ಷದ ಸಂಪ್ರದಾಯವಾದಿ ಮನಸ್ಥಿತಿಗೆ ಸವಾಲು ಎಸೆದಿರುತ್ತದೆ. ಪ್ರತಿಯೊಬ್ಬ ಪೌರನ ಮೇಲೂ ನಿಗಾ ಇಟ್ಟು ಬೇಹುಗಾರಿಕೆ ನಡೆಸುವುದು ಅಸಾಧ್ಯ ಸಂಗತಿ. ಹೀಗಾಗಿ ಓಶಿಯಾನಾದ ಥಿಂಕ್ ಪೋಲ್ ಅಥವಾ ಆಲೋಚನಾ ಪೊಲೀಸರು ಇಮ್ಮುಖ ಟೆಲಿವಿಜನ್ ಪರದೆಗಳ ತಂತ್ರಜ್ಞಾನ ಬಳಸುತ್ತಾರೆ. ಪ್ರತಿಯೊಬ್ಬ ವ್ಯಕ್ತಿಯ ಆಂಗಿಕ ಚರ್ಯೆ ಅಥವಾ ಆಂಗಿಕ ಭಾಷೆಯ ಮೇಲೆ ನಿಗಾ ಇಟ್ಟಿರುತ್ತಾರೆ. ಮುಖಚರ್ಯೆಯನ್ನು ಕೂಡ ಓದಿಕೊಳ್ಳುತ್ತಿರುತ್ತಾರೆ. ಪ್ರಜೆಗಳ ಪಿಸುಮಾತನ್ನೂ ಟೆಲಿಸ್ಕ್ರೀನ್ ಗಬಕ್ಕನೆ ಹಿಡಿದುಕೊಳ್ಳುವಷ್ಟು ಸೂಕ್ಷ್ಮಗ್ರಾಹಿಯಾಗಿರುತ್ತದೆ. ಆಕೆ ಅಥವಾ ಆಕೆ ಪರದೆಯ ವ್ಯಾಪ್ತಿಯಲ್ಲಿರುವ ತನಕ ಅವರ ಬಿಂಬವನ್ನು ಬೇಹುಗಾರರು ನೋಡಬಹುದಾಗಿರುತ್ತದೆ ಮತ್ತು ಮಾತುಗಳನ್ನು ಕೇಳಬಹುದಾಗಿರುತ್ತದೆ. ಆದರೆ ತಮ್ಮನ್ನು ನೋಡಲಾಗುತ್ತಿದೆ ಮತ್ತು ತಮ್ಮ ಮಾತುಗಳನ್ನು ಕೇಳಿಸಿಕೊಳ್ಳಲಾಗುತ್ತಿದೆ ಎಂಬ ಕಹಿ ಸತ್ಯದ ಅರಿವು ಪೌರರಿಗೆ ಒಂದೇ ಒಂದು ಕ್ಷಣ ಕಾಲವೂ ಆಗುವಂತಿರುವುದಿಲ್ಲ.

ಸಾರ್ವಜನಿಕ ಮತ್ತು ಖಾಸಗಿ ಆವರಣಗಳನ್ನು ಆವರಿಸಿರುವ ಟೆಲಿಸ್ಕ್ರೀನ್, ಓಶಿಯಾನದ ಪ್ರಜೆಗಳ ಮೇಲೆ ನಿರಂತರ ಮಾನಸಿಕ ಒತ್ತಡ ಹೇರಿರುತ್ತದೆ. ತಮ್ಮ ಮೇಲೆ ಥಿಂಕ್ ಪೋಲ್ ಸದಾ ಸರ್ವದಾ ಕಣ್ಣಿಟ್ಟಿದ್ದು, ಯಾವ ಕ್ಷಣದಲ್ಲಿ ಬೇಕಾದರೂ ಥಾಟ್ ಕ್ರಿಮಿನಲ್ ಎಂದು ದಸ್ತಗಿರಿ ಮಾಡುವ ಅಪಾಯವಿದೆ ಎಂಬ ಆತಂಕ ಅವರನ್ನು ಕಾಡಿರುತ್ತದೆ. ತಪ್ಪಾದ ಮತ್ತು ಅನಪೇಕ್ಷಿತ ಆಲೋಚನೆಗಳು ಬಾರದಂತೆ ಹಾದಿಯಲ್ಲೇ ಅವುಗಳನ್ನು ತಡೆದು ನಿಲ್ಲಿಸಿ ತಂತಾನೇ ಅಳಿಸಿ ಹಾಕುವ ಕ್ರಿಯೆ . ಆಳುವ ಪಕ್ಷವು ಭೂಮಿ ಚಪ್ಪಟೆಯಾಗಿದೆ ಎಂದೂ, ಮಂಜುಗಡ್ಡೆಯು ನೀರಿಗಿಂತ ಅಧಿಕ ಭಾರ ಎಂದೂ ಹೇಳಿದರೆ ಅದನ್ನು ವ್ಯತಿರೇಕಿಸಕೂಡದು. ಅಪಾಯಕಾರಿ ಆಲೋಚನೆಯನ್ನು ಸಹಜಪ್ರವೃತ್ತಿಯಿಂದ ಮುಂದಾಗಿಯೇ ಗ್ರಹಿಸಿ, ಹೊಸ್ತಿಲಲ್ಲೇ ತಡೆದುಬಿಡಬೇಕು. 2014ರಲ್ಲಿ ಅಮೆರಿಕದ ಬಿಳಿಯರ ತೀವ್ರ ಬಲಪಂಥೀಯ ಆಂದೋಲನವು ಎಂಬ ಪದವನ್ನೂ ಇದೇ ಅರ್ಥದಲ್ಲಿ ಟಂಕಿಸಿತು.

# ಜೆನ್ ಝಿ ಆಕ್ರೋಶಕ್ಕೆ ನಾಯಕರ ನಡುಕ: ಸ್ವಾತಂತ್ರ್ಯ ದಿನಾಚರಣೆಯ ಸಿಎಂಗಳ ಭಾಷಣಗಳಲ್ಲಿ 'ಯುವಶಕ್ತಿ' ಜಪ

ನಿರಂತರ ಭ್ರಷ್ಟಾಚಾರ, ಪ್ರಶ್ನೆಪತ್ರಿಕೆ ಸೋರಿಕೆ ಮತ್ತು ನಿರುದ್ಯೋಗದ ಸಮಸ್ಯೆಗಳು ಇಂದು ಪ್ರತಿಯೊಂದು ಮನೆಯ ಡ್ರಾಯಿಂಗ್ ರೂಮ್‌ಗಳ ಪ್ರಮುಖ ಚರ್ಚೆಯ ವಿಷಯವಾಗಿವೆ. ಯುವಜನರ ತಾಳ್ಮೆ ನಶಿಸುತ್ತಿರುವುದನ್ನು ಅರಿತಿರುವ ನಾಯಕರು, ಮುಂಬರುವ ಚುನಾವಣೆಗಳಲ್ಲಿ ಆಗಬಹುದಾದ ರಾಜಕೀಯ ಹಾನಿಯನ್ನು ತಪ್ಪಿಸಿಕೊಳ್ಳಲು ಯುವಶಕ್ತಿ ಓಲೈಕೆಯ ತಂತ್ರಕ್ಕೆ ಮೊರೆಹೋಗಿದ್ದಾರೆ.



ಭ್ರಷ್ಟಾಚಾರ, ನಿರುದ್ಯೋಗ, ಪರೀಕ್ಷಾ ಅಕ್ರಮಗಳು ಹಾಗೂ ನಿರಂತರ ಪ್ರಶ್ನೆಪತ್ರಿಕೆ ಸೋರಿಕೆಯಿಂದಾಗಿ ದೇಶದಾದ್ಯಂತ ಯುವಜನರ ಆಕ್ರೋಶದ ಕಟ್ಟೆ ಒಡೆದಿದೆ. ದೆಹಲಿಯ ಜಂತರ್ ಮಂತರ್‌ನಿಂದ ಹಿಡಿದು ಜಾರ್ಖಂಡ್‌ನ ರಾಂಚಿಯವರೆಗೂ ಬೀದಿಗಿಳಿದು ಪ್ರತಿಭಟಿಸುತ್ತಿರುವ ಯುವಕರ ಆಕ್ರೋಶದ ಜ್ವಾಲೆ, ರಾಜಕೀಯ ನಾಯಕರನ್ನು ಅಕ್ಷರಶಃ ಬೆಚ್ಚಿಬೀಳಿಸಿದೆ. ಉದ್ಯೋಗದ ನಿರೀಕ್ಷೆಯಲ್ಲಿದ್ದ ಯುವ ಸಮುದಾಯ ಈಗ ಭ್ರಷ್ಟ ವ್ಯವಸ್ಥೆಯ ವಿರುದ್ಧ ತಿರುಗಿಬಿದ್ದಿದ್ದು, ಈ ಅಸಮಾಧಾನ ಮುಂಬರುವ ಚುನಾವಣೆಗಳಲ್ಲಿ ತಮ್ಮ ಬುಡಕ್ಕೆ ಬಿಸಿ ಮುಟ್ಟಿಸಬಹುದು ಎಂಬ ಆತಂಕ ಹಾಗೂ ಎಚ್ಚರಿಕೆ ಇದೀಗ ಅಧಿಕಾರದಲ್ಲಿರುವ ಪ್ರತಿಯೊಬ್ಬ ನಾಯಕನನ್ನೂ ಕಾಡತೊಡಗಿದೆ.

ಯುವಜನರ ಈ ಸಿಟ್ಟನ್ನು ತಣಿಸುವ ಸ್ಪಷ್ಟ ಹಾಗೂ ಅನಿವಾರ್ಯ ಪ್ರಯತ್ನ ಈ ಬಾರಿಯ 80ನೇ ಸ್ವಾತಂತ್ರ್ಯ ದಿನಾಚರಣೆಯ ಭಾಷಣಗಳಲ್ಲಿ ಎದ್ದು ಕಾಣುತ್ತಿತ್ತು. ಪ್ರಧಾನಿ ನರೇಂದ್ರ ಮೋದಿ ಅವರಿಂದ ಹಿಡಿದು ದೇಶದ ಬಹುತೇಕ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳ ಭಾಷಣದ ಕೇಂದ್ರಬಿಂದು ಯುವಶಕ್ತಿ ಮತ್ತು ಯುವಜನರ ಕಲ್ಯಾಣವಾಗಿತ್ತು. ಕೇವಲ ಸಾಂಪ್ರದಾಯಿಕ ಘೋಷಣೆಗಳಾಚೆಗೆ, ಸ್ಪರ್ಧಾತ್ಮಕ ಪರೀಕ್ಷೆಗಳ ಸುಧಾರಣೆ ಹಾಗೂ ಪಾರದರ್ಶಕ ಉದ್ಯೋಗ ಸೃಷ್ಟಿಯ ಸಾಲು ಸಾಲು ಯೋಜನೆಗಳನ್ನು ಪ್ರಕಟಿಸಿ ಯುವಕರನ್ನು ಓಲೈಸುವ ಕಸರತ್ತು ಜೋರಾಗಿಯೇ ನಡೆಯಿತು.

ಉತ್ತರ ಪ್ರದೇಶದಲ್ಲಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು, ಜೆನ್-ಝೆಡ್ (-) ಮತ್ತು ಜೆನ್-ಆಲ್ಫಾ (-) ಪೀಳಿಗೆಯೇ ರಾಜ್ಯದ ಅತಿದೊಡ್ಡ ಶಕ್ತಿ ಎಂದು ಬಣ್ಣಿಸಿದ್ದಾರೆ. ನಕಲು ಮತ್ತು ನೇಮಕಾತಿ ಮಾಫಿಯಾ ವಿರುದ್ಧ ಕಠಿಣ ಕ್ರಮದ ಎಚ್ಚರಿಕೆ ನೀಡಿದ ಅವರು, ಕೃತಕ ಬುದ್ಧಿಮತ್ತೆ (ಎಐ), ಸೆಮಿಕಂಡಕ್ಟರ್ ರೊಬೊಟಿಕ್ಸ್ ಮತ್ತು ಸೈಬರ್ ಭದ್ರತೆಯಂತಹ ಆಧುನಿಕ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಹೈ-ಟೆಕ್ ಉದ್ಯೋಗ ಸೃಷ್ಟಿಯ ಭರವಸೆ ನೀಡಿದರು. ಅಲ್ಲದೆ, 16ರಿಂದ 35 ವರ್ಷದ ಯುವಕರಿಗಾಗಿ ಹೊಸ ಯುವ ನೀತಿಯನ್ನು ಘೋಷಿಸಿದ ಅವರು, ಯುವ ಉದ್ಯಮಿ ಯೋಜನೆಯಡಿ ಬಡ್ಡಿರಹಿತ ಹಾಗೂ ಗ್ಯಾರಂಟಿ ರಹಿತ ಸಾಲ ನೀಡಿ, ಯುವಕರನ್ನು ಕೇವಲ ಉದ್ಯೋಗಾಕಾಂಕ್ಷಿಗಳ ಬದಲಾಗಿ ಉದ್ಯೋಗದಾತರನ್ನಾಗಿ ಮಾಡುವ ಆಶಯ ವ್ಯಕ್ತಪಡಿಸಿದರು.

ಮಧ್ಯಪ್ರದೇಶದಲ್ಲಿ ಮುಖ್ಯಮಂತ್ರಿ ಮೋಹನ್ ಯಾದವ್ ಅವರು 2027ನೇ ವರ್ಷವನ್ನು ಯುವ ವರ್ಷ ಎಂದು ಘೋಷಿಸುವ ಮೂಲಕ ಯುವಕರ ವಿಶ್ವಾಸ ಗಳಿಸಲು ಯತ್ನಿಸಿದ್ದಾರೆ. ಪ್ರತಿವರ್ಷ ಒಂದು ಲಕ್ಷ ಯುವಕರಿಗೆ ಸರ್ಕಾರಿ ಉದ್ಯೋಗ, ಐಟಿಐ ಮೂಲಕ ಮತ್ತೊಂದು ಲಕ್ಷ ಯುವಕರಿಗೆ ಕೌಶಲ ತರಬೇತಿ ಹಾಗೂ ಗ್ಲೋಬಲ್ ಸ್ಕಿಲ್ ಪಾರ್ಕ್‌ನಲ್ಲಿ 10 ಸಾವಿರ ಯುವಕರಿಗೆ ತರಬೇತಿ ನೀಡುವ ಬೃಹತ್ ಭರವಸೆ ನೀಡಿದ್ದಾರೆ. ಕೇವಲ ಕೈಗಾರಿಕೆಗಳಷ್ಟೇ ಅಲ್ಲದೆ, ಕೃಷಿ ಮತ್ತು ತೋಟಗಾರಿಕೆ ಕ್ಷೇತ್ರಗಳಲ್ಲೂ ಉದ್ಯೋಗ ಕಂಡುಕೊಳ್ಳಲು ಯುವಕರಿಗೆ ಕರೆ ನೀಡಿದ ಅವರು, ಪ್ರತಿ ಜಿಲ್ಲೆಯಲ್ಲೂ ನೂತನ ಎಂಎಸ್‌ಎಂಇ () ಪಾರ್ಕ್‌ಗಳ ಸ್ಥಾಪನೆ, ವೈದ್ಯಕೀಯ ಕ್ಷೇತ್ರದಲ್ಲಿ ಹೊಸ ನೇಮಕಾತಿಗಳು ಹಾಗೂ ರೋಗಿಗಳ ಡಿಜಿಟಲ್ ದಾಖಲಾತಿ ವ್ಯವಸ್ಥೆಯ ಭರವಸೆ ನೀಡಿದ್ದಾರೆ.

ಉತ್ತರಾಖಂಡದಲ್ಲಿ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧರಾಗುತ್ತಿರುವ ವಿದ್ಯಾರ್ಥಿಗಳಿಗೆ ನೆರವಾಗಲು 7 ಕೋಟಿ ರೂ. ವೆಚ್ಚದ ಮುಖ್ಯಮಂತ್ರಿ ಯುವ ಭವಿಷ್ಯ ನಿರ್ಮಾಣ ಯೋಜನೆ ಪ್ರಕಟಿಸಿದ್ದಾರೆ. ಇದರ ಮೊದಲ ಹಂತದಲ್ಲಿ 11 ಮತ್ತು 12ನೇ ತರಗತಿಯ 10,000 ವಿದ್ಯಾರ್ಥಿಗಳಿಗೆ ಉಚಿತ ಆನ್‌ಲೈನ್ ಕೋಚಿಂಗ್ ನೀಡಲಾಗುವುದು. ಜೊತೆಗೆ ಯುವ ಆಯೋಗ ರಚನೆ, ಮಕ್ಕಳಿಗಾಗಿ ಬಾಲ ವೀರ್ತಾ ಪುರಸ್ಕಾರ ಹಾಗೂ 18ರಿಂದ 30 ವರ್ಷದೊಳಗಿನ ಯುವಕರಿಗೆ ಸ್ವಯಂ ಉದ್ಯೋಗ ಯೋಜನೆ ಘೋಷಿಸಿದ್ದಾರೆ. ಇತ್ತ ಗೋವಾದಲ್ಲಿ ಸಿಎಂ ಪ್ರಮೋದ್ ಸಾವಂತ್, ರಾಜ್ಯ ಸಿಬ್ಬಂದಿ ಆಯ್ಕೆ ಆಯೋಗದ ಮೂಲಕ ತಕ್ಷಣವೇ 2,000 ಯುವಕರಿಗೆ ಉದ್ಯೋಗ ನೀಡುವುದಾಗಿ ಭರವಸೆ ನೀಡಿದ್ದಾರೆ.


ಪ್ರಶ್ನೆಪತ್ರಿಕೆ ಸೋರಿಕೆ ಮತ್ತು ನೇಮಕಾತಿ ಭ್ರಷ್ಟಾಚಾರದ ನೇರ ಬಿಸಿ ಅನುಭವಿಸುತ್ತಿರುವ ಬಿಹಾರ ಮತ್ತು ಜಾರ್ಖಂಡ್‌ನಲ್ಲೂ ಯುವಕರನ್ನು ಸಮಾಧಾನಪಡಿಸುವ ಯತ್ನಗಳು ಜೋರಾಗಿವೆ. ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರು, ಜೆಪಿಎಸ್‌ಸಿ () ಮತ್ತು ಜೆಎಸ್‌ಎಸ್‌ಸಿ () ಪರೀಕ್ಷಾ ಅಕ್ರಮಗಳ ಕುರಿತು ಕಠಿಣ ಕ್ರಮದ ಭರವಸೆ ನೀಡಿದ್ದಲ್ಲದೆ, ಯುವಕರ ಕನಸುಗಳನ್ನು ಕಾಪಾಡುವುದು ತಮ್ಮ ವೈಯಕ್ತಿಕ ಜವಾಬ್ದಾರಿ ಎಂದಿದ್ದಾರೆ. ವಿದ್ಯಾರ್ಥಿಗಳೊಂದಿಗೆ ನೇರ ಸಂವಾದ ನಡೆಸಲು ಛಾತ್ರೋನ್ ಕೀ ಬಾತ್ ಛಾತ್ರೋನ್ ಕೆ ಸಾಥ್ ಎಂಬ ವಿನೂತನ ಕಾರ್ಯಕ್ರಮ ಘೋಷಿಸಿದ್ದಾರೆ. ಇತ್ತ ಬಿಹಾರ ಸರ್ಕಾರವು ಪರೀಕ್ಷಾ ವ್ಯವಸ್ಥೆಯನ್ನು ಶುದ್ಧೀಕರಿಸಲು ಪ್ರತ್ಯೇಕ ಸುಧಾರಣಾ ಸಮಿತಿ ರಚನೆ ಹಾಗೂ 30 ದಿನಗಳೊಳಗೆ ವಿದ್ಯಾರ್ಥಿಗಳ ಕುಂದುಕೊರತೆ ಬಗೆಹರಿಸಲು ಪ್ರತ್ಯೇಕ ವಿದ್ಯಾರ್ಥಿ ಬೆಂಬಲ ಪೋರ್ಟಲ್ ಆರಂಭಿಸುವ ನಿರ್ಧಾರ ಪ್ರಕಟಿಸಿದೆ.

ಹಿಮಾಚಲ ಪ್ರದೇಶದಲ್ಲಿ ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ಅವರು, ಹಿಂದಿನ ಬಿಜೆಪಿ ಸರ್ಕಾರದ ಅವಧಿಯ ಪೊಲೀಸ್ ನೇಮಕಾತಿ ಪರೀಕ್ಷೆ ಪೇಪರ್ ಲೀಕ್ ಹಗರಣವನ್ನು ನೆನಪಿಸಿ, ತಮ್ಮ ಸರ್ಕಾರ ಕಳಂಕಿತ ನೇಮಕಾತಿ ಮಂಡಳಿಯನ್ನು ವಿಸರ್ಜಿಸಿ ಪಾರದರ್ಶಕತೆ ತಂದಿದೆ ಹಾಗೂ ತಪ್ಪಿತಸ್ಥರನ್ನು ಜೈಲಿಗೆ ಕಳುಹಿಸಿದೆ ಎಂದು ಸಮರ್ಥಿಸಿಕೊಂಡರು. ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ಪಾಶ್ಚಿಮಾತ್ಯ ಜೆನ್-ಝೆಡ್ ಪರಿಕಲ್ಪನೆಯನ್ನು ತಳ್ಳಿಹಾಕಿ, ಯುವಜನರನ್ನು ತಮ್ಮ ಮಕ್ಕಳು ಎಂದು ಬಣ್ಣಿಸುವ ಮೂಲಕ ಯುವ ಸಬಲೀಕರಣ ಮತ್ತು ಅಭಿವೃದ್ಧಿ ಇಲಾಖೆ ತೆರೆಯುವುದಾಗಿ ತಿಳಿಸಿದ್ದಾರೆ. ಛತ್ತೀಸ್‌ಗಢದಲ್ಲಿ ಸಿಎಂ ವಿಷ್ಣುದೇವ್ ಸಾಯ್ ಅವರು ಸ್ಪರ್ಧಾತ್ಮಕ ಪರೀಕ್ಷೆ ಬರೆಯುವ ಯುವಕರಿಗೆ ಆರ್ಥಿಕ ಮತ್ತು ಪೂರಕ ನೆರವು ನೀಡಲು ಸಿಜಿ ಅಸಿಸ್ಟೆಂಟ್ ಫಾರ್ ಕಾಂಪಿಟೇಟಿವ್ ಎಕ್ಸಾಮ್ ಯೋಜನೆ ಪ್ರಕಟಿಸಿದ್ದಾರೆ. ಗುಜರಾತ್ ಸಿಎಂ ಭೂಪೇಂದ್ರ ಪಟೇಲ್, ಮೀಸಲಾತಿ ವ್ಯಾಪ್ತಿಯ ಯುವಕರಿಗೆ ವಿದೇಶಿ ವ್ಯಾಸಂಗದ ಸಾಲದ ವಾರ್ಷಿಕ ಆದಾಯ ಮಿತಿಯನ್ನು 6 ಲಕ್ಷದಿಂದ 10 ಲಕ್ಷ ರೂ.ಗಳಿಗೆ ಏರಿಕೆ ಮಾಡಿದ್ದಾರೆ. ಇತ್ತ ರಾಜಸ್ಥಾನದ ಮುಖ್ಯಮಂತ್ರಿ ಭಜನ್‌ಲಾಲ್ ಶರ್ಮಾ ಬಿಕಾನೇರ್‌ನಲ್ಲಿ ನೇರವಾಗಿ ಯುವಕರೊಂದಿಗೆ ಸಂವಾದ ನಡೆಸಿ ಭರವಸೆ ತುಂಬುವ ಯತ್ನ ಮಾಡಿದ್ದಾರೆ.

ನಿರಂತರ ಭ್ರಷ್ಟಾಚಾರ, ಪ್ರಶ್ನೆಪತ್ರಿಕೆ ಸೋರಿಕೆ ಮತ್ತು ನಿರುದ್ಯೋಗದ ಸಮಸ್ಯೆಗಳು ಇಂದು ಪ್ರತಿಯೊಂದು ಮನೆಯ ಡ್ರಾಯಿಂಗ್ ರೂಮ್‌ಗಳ ಪ್ರಮುಖ ಚರ್ಚೆಯ ವಿಷಯವಾಗಿವೆ. ಯುವಜನರ ತಾಳ್ಮೆ ನಶಿಸುತ್ತಿರುವುದನ್ನು ಅರಿತಿರುವ ನಾಯಕರು, ಮುಂಬರುವ ಚುನಾವಣೆಗಳಲ್ಲಿ ಆಗಬಹುದಾದ ರಾಜಕೀಯ ಹಾನಿಯನ್ನು ತಪ್ಪಿಸಿಕೊಳ್ಳಲು ಈ ಓಲೈಕೆಯ ತಂತ್ರಕ್ಕೆ ಮೊರೆಹೋಗಿದ್ದಾರೆ. ಯುವಜನರ ಓಲೈಕೆಯ ಸುತ್ತ ಗಿರಕಿ ಹೊಡೆಯುತ್ತಿರುವ ಈ ಸಾಲು ಸಾಲು ಹೊಸ ಯೋಜನೆಗಳು ಮತ್ತು ಆಕರ್ಷಕ ಭಾಷಣಗಳು, ಯುವಕರ ಆಕ್ರೋಶದ ಕಟ್ಟೆಯನ್ನು ಭವಿಷ್ಯದಲ್ಲಿ ಎಷ್ಟರಮಟ್ಟಿಗೆ ತಡೆಹಿಡಿಯಲಿವೆ ಎಂಬುದು ಮುಂದಿನ ದಿನಗಳಲ್ಲಿ ತಿಳಿಯಲಿದೆ .

# ಸಿಎಜಿ ವರದಿಯಿಂದ ಮೋದಿ ಸರ್ಕಾರದ ಬಣ್ಣ ಬಯಲು; 'ಗ್ರೀನ್ ಇಂಡಿಯಾ ಮಿಷನ್' ಹೆಸರಿನಲ್ಲಿ ನಡೆದಿದೆಯೇ ಬೃಹತ್ ವಂಚನೆ?

ಹವಾಮಾನ ವೈಪರೀತ್ಯಕ್ಕೆ ತಕ್ಷಣ ತುತ್ತಾಗುವ ಸೂಕ್ಷ್ಮ ಪ್ರದೇಶಗಳನ್ನು ಅರಣ್ಯೀಕರಣಕ್ಕೆ ಆದ್ಯತೆಯ ಮೇರೆಗೆ ಆಯ್ಕೆ ಮಾಡುವ ಬದಲು, ನಿಯಮಗಳನ್ನು ಗಾಳಿಗೆ ತೂರಿ ಕಡಿಮೆ ಅಥವಾ ಸಾಧಾರಣ ಆದ್ಯತೆಯ ಪ್ರದೇಶಗಳನ್ನು ಆಯ್ಕೆ ಮಾಡಲಾಗಿದೆ. ಜತೆಗೆ, ಇಡೀ ದೇಶದಲ್ಲಿ ಕೇವಲ ಮಧ್ಯಪ್ರದೇಶ ಮತ್ತು ಛತ್ತೀಸ್‌ಗಢ ರಾಜ್ಯಗಳು ಮಾತ್ರ ಅರಣ್ಯಗಳು ಇಂಗಾಲವನ್ನು ಹೀರಿಕೊಳ್ಳುವ ಪ್ರಮಾಣದ (ಕಾರ್ಬನ್ ಸೀಕ್ವೆಸ್ಟ್ರೇಶನ್) ಮೌಲ್ಯಮಾಪನ ನಡೆಸಿವೆ. ಉಳಿದ ರಾಜ್ಯಗಳು ಈ ಪ್ರಮುಖ ವೈಜ್ಞಾನಿಕ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಕೈಬಿಟ್ಟಿರುವುದು ಮೋದಿ ಸರ್ಕಾರದ ಆಡಳಿತಾತ್ಮಕ ಬೇಜವಾಬ್ದಾರಿಯನ್ನು ಎತ್ತಿ ತೋರಿಸುತ್ತದೆ.



ಹವಾಮಾನ ಬದಲಾವಣೆಯ ಅಪಾಯಗಳನ್ನು ಎದುರಿಸಲು ಮತ್ತು ದೇಶದ ಹಸಿರು ಹೊದಿಕೆಯನ್ನು ವಿಸ್ತರಿಸಲು ಮೋದಿ ಸರ್ಕಾರವು ಅತಿ ಹೆಚ್ಚು ಪ್ರಚಾರದೊಂದಿಗೆ ಜಾರಿಗೊಳಿಸಿದ್ದ ಮಹತ್ವಾಕಾಂಕ್ಷೆಯ ಗ್ರೀನ್ ಇಂಡಿಯಾ ಮಿಷನ್ (ಜಿಐಎಂ) ಸಂಪೂರ್ಣವಾಗಿ ವಿಫಲವಾಗಿದೆ. 2015-16 ರಿಂದ 2024-25 ರವರೆಗಿನ ಹತ್ತು ವರ್ಷಗಳ ದೀರ್ಘಾವಧಿಯಲ್ಲಿ ಈ ಯೋಜನೆಯು ನಿಗದಿತ ಗುರಿ ತಲುಪುವಲ್ಲಿ ದಾರುಣವಾಗಿ ಎಡವಿದ್ದು, ಇದೊಂದು ಬೃಹತ್ ಆಡಳಿತಾತ್ಮಕ ವೈಫಲ್ಯ ಎಂಬುದನ್ನು ಭಾರತದ ಮಹಾಲೇಖಪಾಲರ (ಸಿಎಜಿ) ಕಾರ್ಯಕ್ಷಮತೆ ಲೆಕ್ಕಪರಿಶೋಧನಾ ವರದಿಯು ಎಳೆಎಳೆಯಾಗಿ ಬಿಚ್ಚಿಟ್ಟಿದೆ. 16 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಈ ಯೋಜನೆಯನ್ನು ಪರಿಶೀಲಿಸಿದ ಸಿಎಜಿ, ಮೋದಿ ಸರ್ಕಾರದ ಕಾರ್ಯವೈಖರಿಯನ್ನು ಕಟುವಾಗಿ ಟೀಕಿಸಿದೆ.

ಯೋಜನೆಯಡಿ ಹೊಸ ಅರಣ್ಯ ಸೃಷ್ಟಿಸುವಲ್ಲಿ ಮೋದಿ ಸರ್ಕಾರ ಶೇಕಡಾ 98ರಷ್ಟು ಭಾರಿ ಹಿನ್ನಡೆ ಅನುಭವಿಸಿದೆ. ಸಿಎಜಿ ವರದಿಯ ಪ್ರಕಾರ, ಗ್ರೀನ್ ಇಂಡಿಯಾ ಮಿಷನ್ ಅಡಿಯಲ್ಲಿ 1.4 ಮಿಲಿಯನ್ ಹೆಕ್ಟೇರ್‌ನಷ್ಟು ಹೊಸ ಅರಣ್ಯ ಹೊದಿಕೆ ಸೃಷ್ಟಿಸುವ ಬೃಹತ್ ಗುರಿಯನ್ನು ಸರ್ಕಾರ ಹೊಂದಿತ್ತು. ಆದರೆ, ವಾಸ್ತವದಲ್ಲಿ ಕೇವಲ 0.03409 ಮಿಲಿಯನ್ ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಹಸಿರು ಹೊದಿಕೆ ವೃದ್ಧಿಯಾಗಿದೆ. ಇದು ಶೇಕಡಾ 97.57ರಷ್ಟು ಕಲ್ಪನೆಗೂ ಮೀರಿದ ವೈಫಲ್ಯವಾಗಿದ್ದು, ಹಸಿರೀಕರಣದ ಹೆಸರಿನಲ್ಲಿ ಮೋದಿ ಸರ್ಕಾರ ತೋರಿದ ದಿವ್ಯ ನಿರ್ಲಕ್ಷ್ಯಕ್ಕೆ ಸ್ಪಷ್ಟ ನಿದರ್ಶನವಾಗಿದೆ.

ಹೊಸ ಅರಣ್ಯ ಸೃಷ್ಟಿ ಮಾತ್ರವಲ್ಲದೆ, ಅಸ್ತಿತ್ವದಲ್ಲಿರುವ ಅರಣ್ಯದ ಗುಣಮಟ್ಟ ಸುಧಾರಿಸುವಲ್ಲಿಯೂ ಮೋದಿ ಸರ್ಕಾರ ಹೀನಾಯವಾಗಿ ಸೋತಿದೆ. 14 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಅರಣ್ಯದ ಗುಣಮಟ್ಟವನ್ನು ಸುಧಾರಿಸುವ ಗುರಿಯನ್ನು ನಿಗದಿಪಡಿಸಲಾಗಿತ್ತು. ಆದರೆ, ಕೇವಲ 1.4 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಸುಧಾರಣೆ ಕಂಡುಬಂದಿದೆ. ಈ ವಿಭಾಗದಲ್ಲೂ ಶೇಕಡಾ 91.87ರಷ್ಟು ಭಾರಿ ಕೊರತೆ ಉಂಟಾಗಿದ್ದು, ಪರಿಸರ ಸಂರಕ್ಷಣೆಯ ಬಗ್ಗೆ ಮೋದಿ ಸರ್ಕಾರಕ್ಕಿರುವ ಬದ್ಧತೆಯ ಕೊರತೆಯನ್ನು ಈ ಅಂಕಿ-ಅಂಶಗಳು ಜಗಜ್ಜಾಹೀರು ಮಾಡಿವೆ.

ಆರ್ಥಿಕ ಶಿಸ್ತಿನ ಬಗ್ಗೆ ಸದಾ ಮಾತನಾಡುವ ಮೋದಿ ಸರ್ಕಾರವು, ಈ ಮಹತ್ವದ ಪರಿಸರ ಯೋಜನೆಯ ವಿಚಾರದಲ್ಲಿ ತೀವ್ರ ಆರ್ಥಿಕ ನಿರ್ಲಕ್ಷ್ಯ ಮೆರೆದಿದೆ. ಗ್ರೀನ್ ಇಂಡಿಯಾ ಮಿಷನ್‌ಗೆ ಒಟ್ಟು ₹10,600 ಕೋಟಿಗಳ ಪ್ರಸ್ತಾವಿತ ಹಣಕಾಸು ನೆರವನ್ನು ಒದಗಿಸಲು ಮೋದಿ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಯೋಜನೆಯ ಆರಂಭಿಕ ನಾಲ್ಕು ವರ್ಷಗಳಿಗೆ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿಯು (ಸಿಸಿಇಎ) ₹2,000 ಕೋಟಿ ಅನುಮೋದಿಸಿತ್ತು ಹಾಗೂ 13ನೇ ಹಣಕಾಸು ಆಯೋಗದಿಂದ ₹400 ಕೋಟಿ ಒದಗಿಸಲಾಗಿತ್ತು. ಆದರೆ, ಹತ್ತು ವರ್ಷಗಳಲ್ಲಿ ಬಜೆಟ್ ಮೂಲಕ ಬಿಡುಗಡೆಯಾಗಿದ್ದು ಕೇವಲ ₹1,149.14 ಕೋಟಿ (ಶೇ 47.88) ಮಾತ್ರ.

ನಿಧಿಯ ಕೊರತೆಯ ಜತೆಗೆ, ಬಿಡುಗಡೆಯಾದ ಹಣದ ನಿರ್ವಹಣೆಯಲ್ಲೂ ಮೋದಿ ಸರ್ಕಾರದ ಆಡಳಿತದಲ್ಲಿ ಭಾರೀ ಲೋಪಗಳು ಹಾಗೂ ಅಕ್ರಮದ ವಾಸನೆ ಕಂಡುಬಂದಿದೆ. ವರದಿಯ ಪ್ರಕಾರ, ಎಂಟು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಈ ಯೋಜನೆಗೆ ಸಂಬಂಧಿಸಿದ ವಾರ್ಷಿಕ ಲೆಕ್ಕಪತ್ರಗಳನ್ನೇ ನಿರ್ವಹಿಸಿಲ್ಲ. ಲೆಕ್ಕಪತ್ರಗಳನ್ನು ಸಿದ್ಧಪಡಿಸಿದ ಕಡೆಗಳಲ್ಲೂ ಆಡಿಟ್ ಮಾಡಿಸದೆ, ಹಣಕಾಸಿನ ಅಕ್ರಮಗಳು ಮತ್ತು ದುರ್ಬಳಕೆಗೆ ಮುಕ್ತ ಅವಕಾಶ ಮಾಡಿಕೊಡಲಾಗಿದೆ. ಇದು ಸಾರ್ವಜನಿಕ ಹಣದ ಸಂಪೂರ್ಣ ದುರ್ಬಳಕೆಯ ಸಂಶಯವನ್ನು ಹುಟ್ಟುಹಾಕಿದೆ.

ಯಾವುದೇ ರಾಷ್ಟ್ರೀಯ ಯೋಜನೆಯ ಯಶಸ್ಸಿಗೆ ತಳಮಟ್ಟದ (ಬಾಟಮ್-ಅಪ್) ಯೋಜನಾ ವ್ಯವಸ್ಥೆ ಮತ್ತು ವಿವಿಧ ಇಲಾಖೆಗಳ ಸಮನ್ವಯತೆ ಅತ್ಯಗತ್ಯ. ಆದರೆ, ಮೋದಿ ಸರ್ಕಾರದ ಗ್ರೀನ್ ಇಂಡಿಯಾ ಮಿಷನ್‌ನಲ್ಲಿ ಈ ಎರಡೂ ಅಂಶಗಳು ಸಂಪೂರ್ಣವಾಗಿ ಮಾಯವಾಗಿವೆ. ಈ ಮಿಷನ್ ಅನ್ನು ಕಾಂಪಾ, ಮಹಾತ್ಮ ಗಾಂಧಿ ನರೇಗಾ, ನಗರ ವನ ಯೋಜನೆ ಮತ್ತು ಶಾಲಾ ನರ್ಸರಿ ಯೋಜನೆಗಳೊಂದಿಗೆ ಸಂಯೋಜಿಸಿ ಜಾರಿಗೊಳಿಸಬೇಕಿತ್ತು. ಆದರೆ, ಸಮನ್ವಯತೆಯ ಕೊರತೆಯಿಂದಾಗಿ ಈ ಎಲ್ಲಾ ಯೋಜನೆಗಳು ಪ್ರತ್ಯೇಕ ದ್ವೀಪಗಳಂತೆ ಕಾರ್ಯನಿರ್ವಹಿಸಿ ಹಣ ಹಾಗೂ ಶ್ರಮವನ್ನು ಪೋಲು ಮಾಡಿವೆ.

ಹವಾಮಾನ ವೈಪರೀತ್ಯಕ್ಕೆ ತಕ್ಷಣ ತುತ್ತಾಗುವ ಸೂಕ್ಷ್ಮ ಪ್ರದೇಶಗಳನ್ನು ಅರಣ್ಯೀಕರಣಕ್ಕೆ ಆದ್ಯತೆಯ ಮೇರೆಗೆ ಆಯ್ಕೆ ಮಾಡುವ ಬದಲು, ನಿಯಮಗಳನ್ನು ಗಾಳಿಗೆ ತೂರಿ ಕಡಿಮೆ ಅಥವಾ ಸಾಧಾರಣ ಆದ್ಯತೆಯ ಪ್ರದೇಶಗಳನ್ನು ಆಯ್ಕೆ ಮಾಡಲಾಗಿದೆ. ಜತೆಗೆ, ಇಡೀ ದೇಶದಲ್ಲಿ ಕೇವಲ ಮಧ್ಯಪ್ರದೇಶ ಮತ್ತು ಛತ್ತೀಸ್‌ಗಢ ರಾಜ್ಯಗಳು ಮಾತ್ರ ಅರಣ್ಯಗಳು ಇಂಗಾಲವನ್ನು ಹೀರಿಕೊಳ್ಳುವ ಪ್ರಮಾಣದ (ಕಾರ್ಬನ್ ಸೀಕ್ವೆಸ್ಟ್ರೇಶನ್) ಮೌಲ್ಯಮಾಪನ ನಡೆಸಿವೆ. ಉಳಿದ ರಾಜ್ಯಗಳು ಈ ಪ್ರಮುಖ ವೈಜ್ಞಾನಿಕ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಕೈಬಿಟ್ಟಿರುವುದು ಮೋದಿ ಸರ್ಕಾರದ ಆಡಳಿತಾತ್ಮಕ ಬೇಜವಾಬ್ದಾರಿಯನ್ನು ಎತ್ತಿ ತೋರಿಸುತ್ತದೆ.

ಕ್ಷೇತ್ರ ಮಟ್ಟದಲ್ಲಿ ವಾಸ್ತವವಾಗಿ ಯಾವುದೇ ಸಾಧನೆಯಾಗದಿದ್ದರೂ, ಅಂಕಿ-ಅಂಶಗಳನ್ನು ನಕಲಿಯಾಗಿ ಹೆಚ್ಚಿಸಿ ಕಾಗದದ ಮೇಲೆ ಹಸಿರು ಕ್ರಾಂತಿಯನ್ನು ಸೃಷ್ಟಿಸುವಲ್ಲಿ ಮೋದಿ ಸರ್ಕಾರ ನಿರತವಾಗಿದೆ ಎಂಬುದನ್ನು ಸಿಎಜಿ ಸಾಕ್ಷ್ಯ ಸಮೇತ ಬಯಲು ಮಾಡಿದೆ. ಉಪಗ್ರಹ ಆಧಾರಿತ ಜಿಐಎಸ್ ವಿಶ್ಲೇಷಣೆ ನಡೆಸಿದಾಗ, ಪರಿಶೀಲಿಸಲಾದ ಶೇಕಡಾ 70ರಷ್ಟು ಸ್ಯಾಂಪಲ್ ತಾಣಗಳಲ್ಲಿ ಯಾವುದೇ ಗಮನಾರ್ಹ ಹಸಿರು ಹೊದಿಕೆಯ ಬದಲಾವಣೆಯೇ ಕಂಡುಬಂದಿಲ್ಲ. ಅಲ್ಲದೆ, ಸಾರ್ವಜನಿಕ ಪಾರದರ್ಶಕತೆಗಾಗಿ ವೆಬ್‌ಲಿಂಕ್‌ಗಳನ್ನು ಒದಗಿಸುವಲ್ಲಿ 14 ರಾಜ್ಯಗಳು ವಿಫಲವಾಗುವ ಮೂಲಕ ಮಾಹಿತಿಯನ್ನು ಉದ್ದೇಶಪೂರ್ವಕವಾಗಿ ಮುಚ್ಚಿಟ್ಟಿವೆ.

ಪ್ಯಾರಿಸ್ ಹವಾಮಾನ ಒಪ್ಪಂದದಡಿ ಭಾರತವು 2030ರ ವೇಳೆಗೆ ಹೆಚ್ಚುವರಿ ಅರಣ್ಯದ ಮೂಲಕ 2.5 ರಿಂದ 3 ಶತಕೋಟಿ ಟನ್‌ಗಳಷ್ಟು ಇಂಗಾಲದ ಸಿಂಕ್ ಸೃಷ್ಟಿಸುವ ಜಾಗತಿಕ ಬದ್ಧತೆಯನ್ನು ಹೊಂದಿದೆ. ಈ ಗುರಿ ತಲುಪಲು ಗ್ರೀನ್ ಇಂಡಿಯಾ ಮಿಷನ್ ಪ್ರಮುಖ ಅಸ್ತ್ರವಾಗಿತ್ತು. ಆದರೆ, ದಶಕ ಕಳೆದರೂ ಕನಿಷ್ಠ ಗುರಿ ತಲುಪದ ಈ ಭಾರಿ ವೈಫಲ್ಯದಿಂದಾಗಿ ಜಾಗತಿಕ ಮಟ್ಟದಲ್ಲಿ ಹವಾಮಾನ ಬದಲಾವಣೆ ವಿರುದ್ಧದ ಹೋರಾಟದಲ್ಲಿ ಮೋದಿ ಸರ್ಕಾರದ ಪ್ರಾಮಾಣಿಕತೆ ಮತ್ತು ಸಾಮರ್ಥ್ಯದ ಬಗ್ಗೆಯೇ ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಮುಖಭಂಗ ಅನುಭವಿಸುವಂತಾಗಿದೆ.

ಸಿಎಜಿ ವರದಿಯ ಮೂಲಕ ಆಡಳಿತಾತ್ಮಕ ವೈಫಲ್ಯಗಳು ಜಗಜ್ಜಾಹೀರಾಗುತ್ತಿದ್ದಂತೆ, ರಾಜಕೀಯ ವಲಯದಲ್ಲಿ ಮೋದಿ ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತವಾಗಿದೆ. 2010ರಲ್ಲಿ ಆಗಿನ ಪ್ರಧಾನಿ ಮನಮೋಹನ್ ಸಿಂಗ್ ಅವರ ಅವಧಿಯಲ್ಲಿ ವೈಜ್ಞಾನಿಕವಾಗಿ ರೂಪಿಸಲಾಗಿದ್ದ ಈ ಯೋಜನೆಯನ್ನು ಪ್ರಸ್ತುತ ಮೋದಿ ಸರ್ಕಾರವು ಕೇವಲ ತೋರಿಕೆಯ ಹಸಿರೀಕರಣ (ಗ್ರೀನ್‌ವಾಶಿಂಗ್) ತಂತ್ರವನ್ನಾಗಿ ಮಾಡಿಕೊಂಡಿದೆ ಎಂದು ಮಾಜಿ ಪರಿಸರ ಸಚಿವ ಜೈರಾಮ್ ರಮೇಶ್ ಟೀಕಿಸಿದ್ದಾರೆ. ಇದು ಕೇವಲ ವೈಫಲ್ಯವಲ್ಲ, ಭಾರತದ ಜನತೆಗೆ ಮೋದಿ ಸರ್ಕಾರ ಮಾಡಿದ ಬೃಹತ್ ವಂಚನೆ ಎಂದು ಕಿಡಿಕಾರುವ ಮೂಲಕ ಸರ್ಕಾರದ ನಿಷ್ಕ್ರಿಯತೆಯನ್ನು ಅವರು ಕಟುವಾಗಿ ಪ್ರಶ್ನಿಸಿದ್ದಾರೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR